ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಡಿಸೆಂಬರ್ 17, 2020

ಸಂಪುಟ : 47 ಸಂಚಿಕೆ : 227 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com




ಚಿತ್ರ: ರಫೀಕ್, ಜನತಾವಾಣಿ

**ಚಳಿಗಾಲ...** ಈಗಾಗಲೇ ಚಳಿಗಾಲ ಆರಂಭವಾಗಿದ್ದು, ದೇಹವನ್ನು ಬೆಚ್ಚಗಿಡುವ ಉಡುಪುಗಳ ಖರೀದಿ ಹೆಚ್ಚಾಗಿದೆ. ದಾವಣಗೆರೆಯ ಹೈಸ್ಕೂಲ್ ಮೈದಾನದ ಬಳಿಯ ಫುಟ್ ಪಾತ್ ವ್ಯಾಪಾರಿ ಬಳಿ ಮಹಿಳೆಯರು ಉಣ್ಣೆ ಬಟ್ಟೆ ಖರೀದಿಯಲ್ಲಿ ತೊಡಗಿರುವುದು.

# 3.92 ಲಕ್ಷ ಕೋಟಿ ರೂ. ಸ್ಪೆಕ್ಟ್ರಮ್ ಹರಾಜಿಗೆ ಕೇಂದ್ರ ಸಂಪುಟ ಅಸ್ತು

ನವದೆಹಲಿ, ಡಿ. 16 - 3.92 ಲಕ್ಷ ಕೋಟಿ ರೂ. ಮೂಲ ಬೆಲೆಯ 2,251.25 ಎಂ.ಹೆಚ್.ಝಡ್ ಸ್ಪೆಕ್ಟ್ರಮ್ ಹರಾಜಿನ ಪ್ರಸ್ತಾಪಕ್ಕೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ.

ಡಿಸೆಂಬರ್‌ನಲ್ಲಿ ಟೆಲಿಕಾಂ ಸಚಿವಾಲಯ ಬಿಡ್ ಆಹ್ವಾನಕ್ಕೆ ನೋಟಿಸ್ ಕಳಿಸಲಿದೆ. ಮಾರ್ಚ್ ತಿಂಗಳಲ್ಲಿ ಸ್ಪೆಕ್ಟ್ರಮ್ ಹರಾಜು ನಡೆಯಲಿದೆ ಎಂದು ಟೆಲಿಕಾಂ ಸಚಿವ ರವಿ ಶಂಕರ್ ಪ್ರಸಾದ್ ತಿಳಿಸಿದ್ದಾರೆ.

ಆದರೆ, 5ಜಿ ಸೇವೆಗಳಿಗೆ ಗುರುತಿಸಲಾದ 3,00-3,600 ಎಂಹೆಚ್‌ಝಡ್ ಬ್ಯಾಂಡ್ ಸ್ಪೆಕ್ಟ್ರಮ್ ಹರಾಜಿಗೆ ಹಾಕದಿರಲು ನಿರ್ಧರಿಸಲಾಗಿದೆ.

700, 800, 900, 1800, 2100, 2300 ಹಾಗೂ 2,500 ಎಂಹೆಚ್‌ಝಡ್ ಫ್ರೀಕ್ವೆನ್ಸಿ ಬ್ಯಾಂಡ್‌ಗಳ ಸ್ಪೆಕ್ಟ್ರಮ್ ಹರಾಜಿಗೆ ಹಾಕಲಾಗುವುದು. ಇದರ ಅವಧಿ 20 ವರ್ಷಗಳಾಗಿರಲಿದೆ. ಒಟ್ಟಾರೆ 2,251.25ಎಂಹೆಚ್‌ಝಡ್ ಸ್ಪೆಕ್ಟ್ರಮ್ ಅನ್ನು ಹರಾಜಿಗೆ ಹಾಕಲಿದ್ದು, ಇದರ ಮೂಲ ಬೆಲೆ 3,92,332.70 ಕೋಟಿ ರೂ. ಎಂದು ಅಂದಾಜಿಸಲಾಗಿದೆ ಎಂದು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

### 5ಜಿ ಸ್ಪೆಕ್ಟ್ರಮ್ ಹರಾಜು ಮಾಡದಿರಲು ನಿರ್ಧಾರ



ಟೆಲಿಕಾಂ ಇಲಾಖೆಯ ಅತ್ಯುನ್ನತ ನಿರ್ಧಾರಕ ಸಂಸ್ಥೆಯಾಗಿರುವ ಡಿಜಿಟಲ್ ಸಂಪರ್ಕ ಆಯೋಗ ಕಳೆದ ಮೇ ತಿಂಗಳಲ್ಲಿ 5ಜಿ ಸೇವೆಗೆ ಬಳಸುವ ಸ್ಪೆಕ್ಟ್ರಮ್ ಸೇರಿದಂತೆ 5.22 ಲಕ್ಷ ಕೋಟಿ ರೂ. ಮೌಲ್ಯದ ಸ್ಪೆಕ್ಟ್ರಮ್ ಹರಾಜಿಗೆ ಒಪ್ಪಿಗೆ ನೀಡಿತ್ತು.

ಆದರೆ, 5ಜಿ ಸೇವೆಗೆ ಗುರುತಿಸಲಾಗಿರುವ 300 ಎಂಹೆಚ್‌ಝಡ್ ಸ್ಪೆಕ್ಟ್ರಮ್ ಅನ್ನು ನೌಕಾ ದಳ ಬಳಸಿಕೊಳ್ಳುತ್ತಿದೆ. ಈ ತರಂಗಾಂತರಗಳು ತನಗೆ ಬೇಕು ಎಂದು ಬಾಹ್ಯಕಾಶ ಇಲಾಖೆ ಸಹ ಕೇಳುತ್ತಿದೆ.

ಮುಂದಿನ ಪೀಳಿಗೆಯ 5ಜಿ ಸೇವೆಗಳಿಗಾಗಿ 50 ಸಾವಿರ ಕೋಟಿ ರೂ.ಗಳನ್ನು ಖರ್ಚು ಮಾಡಬೇಕಿರುವುದರಿಂದ 5ಜಿ ಸ್ಪೆಕ್ಟ್ರಮ್ ಬೆಲೆ ಕಡಿಮೆ ಮಾಡಬೇಕೆಂದು ಟೆಲಿಕಾಂ ವಲಯ ಬೇಡಿಕೆ ಮುಂದಿಟ್ಟಿದೆ.

5ಜಿ ಸ್ಪೆಕ್ಟ್ರಮ್ ಸ್ಥಿತಿಗತಿಯ ಕುರಿತು ಕೇಳಲಾದ ಪ್ರಶ್ನೆಗೆ ಪ್ರಸಾದ್ ಉತ್ತರಿಸಿಲ್ಲ. ಮುಂಬರುವ ಹರಾಜಿಗೂ ಸಹ 2016ರ ಪಾವತಿ ನಿಯಮಗಳನ್ನು ಮುಂದುವರೆಸಲಾಗುವುದು (3ನೇ ಪುಟಕ್ಕೆ)

## ಜ.1ರಿಂದ ವಿದ್ಯಾಗಮ ಪುನರಾರಂಭ

ಬೆಂಗಳೂರು, ಡಿ. 16 – ಬರುವ ಜನವರಿ 1ರಿಂದ ವಿದ್ಯಾಗಮ ಆರಂಭಿಸುವುದಾಗಿ ರಾಜ್ಯ ಸರ್ಕಾರ ಪ್ರಕಟಣೆಯಲ್ಲಿ ತಿಳಿಸಿದೆ. ಕೊರೊನಾ ಹಿನ್ನೆಲೆಯಲ್ಲಿ ಶಾಲೆಗಳನ್ನು ಮುಚ್ಚಲಾಗಿತ್ತು.

ಮಕ್ಕಳಿಗಾಗಿ ಶಾಲೆಗಳ ಹೊರಗೆ ಈ ಹಿಂದೆ ವಿದ್ಯಾಗಮ ನಡೆಸಲಾಗಿತ್ತು. ನಂತರ ಸರ್ಕಾರ ಪರಿವರ್ತಿತ ವಿದ್ಯಾಗಮವನ್ನು ಶಾಲೆಗಳಲ್ಲೇ ನಡೆಸಲು ತೀರ್ಮಾನಿಸಿದೆ.

ಪರಿಷ್ಕೃತ ವಿದ್ಯಾಗಮವನ್ನು ಪೂರ್ವ ತಯಾರಿ ಹಾಗೂ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು ಜ.1ರಿಂದ ಆರಂಭಿಸುವಂತೆ ಆದೇಶದಲ್ಲಿ ತಿಳಿಸಲಾಗಿದೆ.

## ಕಂದಗಲ್ಲು : ಎಲ್ಲಾ 12 ಸದಸ್ಯರೂ ಅವಿರೋಧ

ದಾವಣಗೆರೆ, ಡಿ.16- ತಾಲ್ಲೂಕಿನ ಕಂದಗಲ್ಲು ಗ್ರಾಮ ಪಂಚಾಯ್ತಿಯ 12 ಸದಸ್ಯರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಗ್ರಾಮದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಎಲ್ಲಾ ಸದಸ್ಯರ ಅವಿರೋಧ ಆಯ್ಕೆ ನಡೆದಿದೆ.

ಈ ಹಿಂದಿನ ಪಂಚಾಯ್ತಿ ಚುನಾವಣೆಗಳು ಸಾಕಷ್ಟು ಆರೋಪ, ಪ್ರತ್ಯಾರೋಪಗಳು, ಬಡಿದಾಟಗಳಿಂದ ಕೂಡಿರುತ್ತಿದ್ದವು. ಇದರಿಂದ ಗ್ರಾಮದವರಲ್ಲಿಯೇ ಪರಸ್ಪರ ವೈಮನಸ್ಸುಗಳು ಮೂಡುತ್ತಿದ್ದವು.

ಆದರೆ ಈ ಬಾರಿ ಹಾಲಿ ಗ್ರಾ. (2ನೇ ಪುಟಕ್ಕೆ)

## ಸಕ್ಕರೆ ರಫ್ತಿಗಾಗಿ 3,500 ಕೋಟಿ ರೂ. ಸಬ್ಸಿಡಿ



ನವದೆಹಲಿ, ಡಿ. 16 - 60 ಲಕ್ಷ ಟನ್ ಸಕ್ಕರೆಯನ್ನು 2020-21ರಲ್ಲಿ ರಫ್ತು ಮಾಡಲು 3,500 ಕೋಟಿ ರೂ.ಗಳ ಸಬ್ಸಿಡಿಯನ್ನು ಸಕ್ಕರೆ ಮಿಲ್ಲುಗಳಿಗೆ ನೀಡಲು ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ.

ಕೇಂದ್ರ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯ ಸಭೆಯಲ್ಲಿ ತೆಗೆದುಕೊಳ್ಳಲಾದ ಈ ನಿರ್ಧಾರವನ್ನು ತಿಳಿಸಿರುವ ಮಾಹಿತಿ ಮತ್ತು ಪ್ರಸಾರ (2ನೇ ಪುಟಕ್ಕೆ)

## ಮಾಡಾಳು, ರಾಮಚಂದ್ರ, ಪ್ರೊ॥ ಲಿಂಗಣ್ಣಗೆ ಸಚಿವ ದರ್ಜೆ

ಬೆಂಗಳೂರು, ಡಿ. 16 – ನಿಗಮ ಮಂಡಳಿಗಳ ಅಧ್ಯಕ್ಷರಿಗೆ ಸಚಿವದ ದರ್ಜೆಯ ಸ್ಥಾನಮಾನ ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಅದರಂತೆ ರಾಜ್ಯ ಸಾಬೂನು ಮತ್ತು ಮಾರ್ಜಕ ನಿಯಮಿತದ ಅಧ್ಯಕ್ಷ ಕೆ. ಮಾಡಾಳು ವಿರೂಪಾಕ್ಷಪ್ಪ ಹಾಗೂ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ವಿ.ರಾಮಚಂದ್ರ ಅವರಿಗೆ ಸಂಪುಟ ದರ್ಜೆ ಸಚಿವರ ಸ್ಥಾನಮಾನ ನೀಡಲಾಗಿದೆ.

ಲಿಡ್ಕರ್ ಅಧ್ಯಕ್ಷ ಪ್ರೊ. ಎನ್.ಲಿಂಗಣ್ಣ ಅವರಿಗೆ ರಾಜ್ಯ ಸಚಿವ ದರ್ಜೆಯ ಸ್ಥಾನಮಾನ ನೀಡಲಾಗಿದೆ. ಅಮೀನಪ್ಪ ಗೌಡ ಎಸ್. ಪಾಟೀಲ್, ದತ್ತಾತ್ರೇಯ ಸಿ. ಪಾಟೀಲ ರೇವೂರ್, ಎಂ. ಚಂದ್ರಪ್ಪ, ಐಹೊಳೆ ದುರ್ಯೋಧನ ಮಹಾಲಿಂಗಪ್ಪ, ನೆಹರು ಚನ್ನಬಸಪ್ಪ ಓಲೇಕಾರ್, ರಾಜುಗೌಡ, ಕೆ. ಶಿವನಗೌಡ ನಾಯಕ್, (2ನೇ ಪುಟಕ್ಕೆ)

## ರೈತರ ಪ್ರತಿಭಟನೆ ಬಗೆಹರಿಸಲು ಸಮಿತಿ ರಚನೆ : ಸುಪ್ರೀಂ ಇಂಗಿತ

ನವದೆಹಲಿ ಡಿ. 16 - ದೆಹಲಿಯಲ್ಲಿ ರೈತರು ನಡೆಸುತ್ತಿರುವ ಪ್ರತಿಭಟನೆ ರಾಷ್ಟ್ರೀಯ ವಿಷಯವಾಗಬಹುದು ಎಂದು ಹೇಳಿರುವ ಸುಪ್ರೀಂ ಕೋರ್ಟ್, ಈ ಬಿಕ್ಕಟ್ಟು ಬಗೆಹರಿಸಲು ಕೇಂದ್ರ ಸರ್ಕಾರ ಹಾಗೂ ದೇಶಾದ್ಯಂತ ಇರುವ ರೈತ ಒಕ್ಕೂಟಗಳ ಪ್ರತಿನಿಧಿಗಳನ್ನು ಒಳಗೊಂಡ ಸಮಿತಿ ರಚಿಸಲು ಇಂಗಿತ ವ್ಯಕ್ತಪಡಿಸಿದೆ.

ನಿಮ್ಮ ಸಂಧಾನ ಫಲ ನೀಡುವಂತೆ ಕಾಣುತ್ತಿಲ್ಲ. ಇದು ವಿಫಲವಾಗುವುದು ನಿಶ್ಚಿತ ಎಂದು ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬ್ಡೆ ಅವರ ನೇತೃತ್ವದ ಪೀಠ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ತಿಳಿಸಿದೆ.

ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಬೇಕು ಇಲ್ಲವೇ ಮಾತನಾಡುವುದಿಲ್ಲ ಎಂದು ರೈತರು ಹೇಳುತ್ತಿದ್ದಾರೆ ಎಂದು ಮೆಹ್ತಾ ನ್ಯಾಯಾಲಯಕ್ಕೆ ಹೇಳಿದರು.

ಇದನ್ನು ಪರಿಗಣಿಸಿದ ನ್ಯಾಯಾಲಯ, ವಿವಾದ ಬಗೆಹರಿಸಲು ನಾವು ಸಮಿತಿ ರಚಿಸುತ್ತೇವೆ. ಇದರಲ್ಲಿ ಸರ್ಕಾರದ ಸದಸ್ಯರು ಹಾಗೂ ರೈತ ಸಂಘಟನೆಗಳ ಸದಸ್ಯರು ಇರಲಿದ್ದಾರೆ. ಇದು (2ನೇ ಪುಟಕ್ಕೆ)

## ಸುಪ್ರೀಂ ಸಮಿತಿ ರಚನೆಗೆ ಪ್ರತಿಭಟನಾ ನಿರತ ರೈತರ ಒಲವಿಲ್ಲ

ನವದೆಹಲಿ, ಡಿ. 16 - ಕೃಷಿ ಕಾಯ್ದೆಗಳ ಕುರಿತ ಬಿಕ್ಕಟ್ಟು ನಿವಾರಣೆಗೆ ಸುಪ್ರೀಂ ಕೋರ್ಟ್ ಹೇಳಿದ ರೀತಿಯಲ್ಲಿ ಸಮಿತಿ ರಚಿಸುವುದು ಪರಿಹಾರವಲ್ಲ ಎಂದು ಪ್ರತಿಭಟನಾ ನಿರತ ರೈತ ಒಕ್ಕೂಟಗಳು ಹೇಳಿವೆ.

ಸರ್ಕಾರ ಕಾಯ್ದೆ ಜಾರಿಗೆ ತರುವುದಕ್ಕೆ ಮುಂಚೆಯೇ ರೈತರ ಸಮಿತಿ ರಚಿಸಬೇಕಿತ್ತು ಎಂದು ಪ್ರತಿಭಟನಾ ನಿರತರು ಹೇಳಿದ್ದಾರೆ.

ಸಮಿತಿ ರಚಿಸುವ ಪ್ರಸ್ತಾವನೆ ಸರ್ಕಾರದಿಂದ ಬಂದಿತ್ತಾದರೂ, ನಾವು ತಿರಸ್ಕರಿಸಿದ್ದೇವೆ. ನ್ಯಾಯಾಲಯ ಸಮಿತಿ ರಚಿಸುವುದರಿಂದ ಪರಿಹಾರ ಸಿಗುವುದಿಲ್ಲ. ನಾವು ಮೂರು ಕಾಯ್ದೆಗಳ ರದ್ದತಿ ಬಯಸಿದ್ದೇವೆ ಎಂದು ಪ್ರತಿಭಟನಾ ನಿರತ ರಾಷ್ಟ್ರೀಯ ಕಿಸಾನ್ ಮಜ್ದೂರ್ ಸಭಾದ ನಾಯಕ ಅಭಿಮನ್ಯು ಕೊಹರ್ ಹೇಳಿದ್ದಾರೆ.

ಟ್ವಿಟ್ಟರ್‌ನಲ್ಲಿ ಹೇಳಿಕೆ ನೀಡಿರುವ ಸಂಯುಕ್ತ ಕಿಸಾನ್ ಮೋರ್ಚಾ ಸದಸ್ಯ ಯೋಗೇಂದ್ರ ಯಾದವ್, ಮೂರು ಕೃಷಿ ಕಾಯ್ದೆಗಳ ಸಂವಿಧಾನಿಕ ಸಿಂಧುತ್ವದ ಬಗ್ಗೆ ಸುಪ್ರೀಂ ಕೋರ್ಟ್ ನಿರ್ಧರಿಸಬೇಕು. ಅದರ ಹೊರತಾಗಿ ಸುಪ್ರೀಂ ಕೋರ್ಟ್ ನೇತೃತ್ವದಲ್ಲಿ ಸಂಧಾನ ನಡೆಸುವುದು ತಪ್ಪು ದಾರಿಯಾಗುತ್ತದೆ ಎಂದಿದ್ದಾರೆ. ಇತರೆ ಹಲವಾರು ರೈತ ಸಂಘಟನೆಗಳೂ ಸಹ ಸಮಿತಿ ರಚಿಸುವುದಕ್ಕೆ ಒಲವು ತೋರಿಲ್ಲ.

## ಲಿಂಗ ಭೇದವಿಲ್ಲದ ಜೀವನಾಂಶ

### ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನೋಟಿಸ್

ನವದೆಹಲಿ, ಡಿ. 16 - ಜೀವನಾಂಶದಲ್ಲಿ ಲಿಂಗ ಹಾಗೂ ಧರ್ಮ ಭೇದವಿಲ್ಲದೇ ಸಮಾನತೆ ಇರಬೇಕು ಎಂದು ದಾಖಲಾಗಿರುವ ಅರ್ಜಿಯ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಅಭಿಪ್ರಾಯ ಕೇಳಿ ಸುಪ್ರೀಂ ಕೋರ್ಟ್ ನೋಟಿಸ್ ಕಳಿಸಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬ್ಡೆ ಅವರ ನೇತೃತ್ವದ ಪೀಠ ಕೇಂದ್ರ ಗೃಹ ಸಚಿವಾಲಯ, ಕಾನೂನು ಸಚಿವಾಲಯ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯಗಳಿಗೆ ನೋಟಿಸ್ ಕಳಿಸಿದೆ. ಬಿಜೆಪಿ ನಾಯಕ ಹಾಗೂ ವಕೀಲ ಅಶ್ವಿನಿ ಉಪಾಧ್ಯಾಯ್ ಅವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿದ್ದಾರೆ. ವೈವಾಹಿಕ ಕಾಯ್ದೆಗಳಲ್ಲಿ ಲಿಂಗ, ಧರ್ಮ, ಜನಾಂಗ ಇಲ್ಲವೇ ಜನನದ ಸ್ಥಳವನ್ನು ಆಧರಿಸಿ ಪಕ್ಷಪಾತ ಮಾಡುವುದು ಸಂವಿಧಾನ ಹಾಗೂ ಅಂತರರರಾಷ್ಟ್ರೀಯ ಒಡಂಬಡಿಕೆಗಳಿಗೆ ವ್ಯತಿರಿಕ್ತವಾಗಿದೆ ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.

**ಜೀವನಾಂಶದಲ್ಲಿ ಇರುವ ಪಕ್ಷಪಾತವನ್ನು ತೆಗೆದು ಹಾಕಬೇಕು. ಎಲ್ಲ ನಾಗರಿಕರಿಗೂ ಸಮಾನ ವಾಗಿ ಜೀವನಾಂಶದ ನಿಯಮಗಳು ಅನ್ವಯವಾಗು ವಂತೆ ಮಾಡಬೇಕು ಎಂದು ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಯಲ್ಲಿ ಕೋರಲಾಗಿದೆ.**

ಹಿರಿಯ ವಕೀಲೆ ಮೀನಾಕ್ಷಿ ಅರೋರಾ ಅವರು ಉಪಾಧ್ಯಾಯ್ ಪರವಾಗಿ ಅರ್ಜಿ ದಾಖಲಿಸಿದ್ದರು. ನೋಟಿಸ್ ಕಳಿಸಿದ ಪೀಠದಲ್ಲಿ ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಹಾಗೂ ವಿ. ರಾಮಸುಬ್ರಮಣ್ಯಂ ಅವರಿದ್ದಾರೆ.

ಜೀವನಾಂಶದಲ್ಲಿ ಇರುವ ಪಕ್ಷಪಾತವನ್ನು ತೆಗೆದು ಹಾಕಬೇಕು. ಎಲ್ಲ (2ನೇ ಪುಟಕ್ಕೆ)

## ಖಾಲಿ ನಿವೇಶನಗಳನ್ನು ಮಾಲೀಕರು ಸ್ವಚ್ಛಗೊಳಿಸದಿದ್ದರೆ ದಂಡ

ದಾವಣಗೆರೆ, ಡಿ.16- ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಖಾಲಿ ಇರುವ ನಿವೇಶನಗಳಲ್ಲಿ ಘನ ತ್ಯಾಜ್ಯ ವಸ್ತುಗಳನ್ನು ಹಾಕುವುದು ಕಂಡು ಬಂದಿರುತ್ತದೆ ಹಾಗೂ ಈ ಬಗ್ಗೆ ಸ್ಥಳೀಯ ಸಾರ್ವಜನಿಕರಿಂದ ಹಲವಾರು ದೂರುಗಳು ಪಾಲಿಕೆಗೆ ಬಂದಿರುತ್ತವೆ.

ಪ್ರಯುಕ್ತ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಖಾಲಿ ನಿವೇಶನ ಹೊಂದಿರುವ ಮಾಲೀಕರು ತಮ್ಮ ತಮ್ಮ ಖಾಲಿ ನಿವೇಶನಗಳನ್ನು ಸ್ವಚ್ಛಮಾಡಿಕೊಳ್ಳಬೇಕಿದೆ. ತಮ್ಮ ಖಾಲಿ ನಿವೇಶನಗಳನ್ನು ಸ್ವಚ್ಛ ಮಾಡುವಲ್ಲಿ ವಿಫಲರಾದಲ್ಲಿ ಪ್ರತಿ ಚದರ ಅಡಿಗೆ ರೂ.10 ರಂತೆ ದಂಡ ವಿಧಿಸಿ, ಕಂದಾಯ ವಹಿಯಲ್ಲಿ ನೋಂದಾಯಿಸಿಕೊಂಡು ವಸೂಲಿ ಮಾಡಲಾಗುವುದು ಎಂದು ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ತಿಳಿಸಿದ್ದಾರೆ.

## ನಿವೃತ್ತ ಅಪರ ಜಿಲ್ಲಾಧಿಕಾರಿ ಎಸ್.ಹೆಚ್. ವಿಜಯಕುಮಾರ್ ನಿಧನ



ದಾವಣಗೆರೆ ಸರಸ್ವತಿ ಬಡಾವಣೆ ವಾಸಿ, ನಿವೃತ್ತ ಅಪರ ಜಿಲ್ಲಾಧಿಕಾರಿ **ಎಸ್.ಹೆಚ್. ವಿಜಯಕುಮಾರ್** (67) ಅವರು ದಿನಾಂಕ 16.12.2020ರಂದು ಬುಧವಾರ ಬೆಳಿಗ್ಗೆ 10 ಗಂಟೆಗೆ ನಿಧನರಾಗಿದ್ದಾರೆ. ಪತ್ನಿ, ನಾಲ್ವರು ಪುತ್ರಿಯರು, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 17.12.2020 ರಂದು ಗುರುವಾರ ಬೆಳಿಗ್ಗೆ 11 ಗಂಟೆಗೆ ಅವರ ಸ್ವಗ್ರಾಮ ಮಳಲಕೆರೆಯಲ್ಲಿ ನೆರವೇರಲಿದೆ.

*ಇಂತಿ ದುಃಖತಪ್ತ ಕುಟುಂಬ ವರ್ಗ*

95384 19124, 99458 25989, 97397 50682

## ವೈದ್ಯರಿಗೆ ಮೊದಲ ಆದ್ಯತೆಯಾಗಿ ಲಸಿಕೆ

### ಕೇಂದ್ರ ಆರೋಗ್ಯ ಸಚಿವಾಲಯದ ಆದೇಶದಂತೆ ಪಟ್ಟಿ ರವಾನಿಸಿದ ರಾಜ್ಯ ಸರ್ಕಾರ

ಬೆಂಗಳೂರು, ಡಿ. 16 - ವೈದ್ಯರೂ ಸೇರಿದಂತೆ ಆಸ್ಪತ್ರೆ ಸಿಬ್ಬಂದಿಗಳಿಗೆ ಮೊದಲ ಆದ್ಯತೆಯಾಗಿ ಕೊರೊನಾ ಲಸಿಕೆ ನೀಡುವ ಸಂಬಂಧ ರಾಜ್ಯ ಸರ್ಕಾರ ಕೇಂದ್ರ ಆರೋಗ್ಯ ಸಚಿವಾಲಯದ ಆದೇಶದಂತೆ ಪಟ್ಟಿ ಸಿದ್ಧಪಡಿಸಿ ಕಳುಹಿಸಿದೆ.

ಈ ಮೊದಲು ಕೊರೊನಾ ವಾರಿಯರ್ಸ್‌ನ ಪ್ರತಿಯೊಬ್ಬರಿಗೂ ಮೊದಲ ಆದ್ಯತೆಯಲ್ಲಿ ಲಸಿಕೆ ನೀಡಲು ಕೇಂದ್ರ ತೀರ್ಮಾನಿಸಿತ್ತು. ಆದರೆ, ಈಗಿನ ನಿರ್ಧಾರದ ಪ್ರಕಾರ ಮೊದಲ ಆದ್ಯತೆ ವೈದ್ಯಕೀಯ ಸಿಬ್ಬಂದಿಯಾಗಿದೆ.



ಕೇಂದ್ರ ಸರ್ಕಾರದ ನಿಯಮಗಳ ಅನ್ವಯ ಕೋ-ವಿನ್ ಜಾಲತಾಣಕ್ಕೆ ಹೆಸರುಗಳನ್ನು ಮತ್ತು ಸೇವಾ ವಿವರವನ್ನು ನೋಂದಾಯಿಸಬೇಕು. ಈ ಸಂದರ್ಭದಲ್ಲಿ ಕಡ್ಡಾಯವಾಗಿ ಆಧಾರ್ ಚೀಟಿ ಸಂಖ್ಯೆ ಮತ್ತು ಚುನಾವಣಾ ಗುರುತಿನ ಚೀಟಿ ಅಥವಾ ಪ್ಯಾನ್ ಕಾರ್ಡ್ ಅಥವಾ ಸರ್ಕಾರಿ ಸ್ವಾಮ್ಯದ ಗುರುತಿನ ಚೀಟಿಯನ್ನು ಲಗತ್ತಿಸಬೇಕು.

ನೋಂದಾವಣೆ ನಂತರ ಇವರು ಎಲ್ಲಿ ಲಸಿಕೆ ಪಡೆದುಕೊಳ್ಳಬೇಕೆಂಬ ಮಾಹಿತಿಯನ್ನು ಕೇಂದ್ರ ಆರೋಗ್ಯ ಸಚಿವಾಲಯ ನೀಡಲಿದೆ.

ಮೊದಲ ಹಂತದಲ್ಲಿ ಪ್ರತಿನಿತ್ಯ ಒಂದು ಕೇಂದ್ರದಲ್ಲಿ 100 ರಿಂದ 200 (3ನೇ ಪುಟಕ್ಕೆ)

## ರಾಮ ಮಂದಿರ ಅಭಿಯಾನದಿಂದ ದೇಣಿಗೆ

ನವದೆಹಲಿ, ಡಿ. 16 - ಜನ ಸಂಪರ್ಕ ಅಭಿಯಾನದ ಮೂಲಕ ದೇಶದಲ್ಲಿ ಸಂಗ್ರಹಿಸುವ ನಿಧಿಯ ಮೂಲಕ ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಿಸಲಾಗುವುದು ಎಂದು ರಾಮ ಮಂದಿರ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಹೇಳಿದ್ದಾರೆ. ರಾಷ್ಟ್ರ ದೇವಾಲಯದ ರೀತಿಯಲ್ಲಿ ರಾಮ ಮಂದಿರ ನಿರ್ಮಾಣ ಪ್ರಕ್ರಿಯೆ ನಡೆಯಲಿದೆ. ಮಂದಿರಕ್ಕಾಗಿ ದೇಶದೆಲ್ಲೆಡೆ ಸಂಪರ್ಕ ಅಭಿಯಾನ ನಡೆಸಿ ದೇಣಿಗೆ ಸಂಗ್ರಹಿಸಲಾಗುವುದು ಎಂದವರು ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರಾಯ್, ಪ್ರಸ್ತಾಪಿತ ನೂತನ ಮಂದಿರದ ಚಿತ್ರಗಳು ಅಭಿಯಾನದ ವೇಳೆ ಕೋಟ್ಯಂತರ ಮನೆಗಳಿಗೆ ತಲುಪಲಿವೆ ಎಂದವರು ಹೇಳಿದ್ದಾರೆ.

10 ರೂ., 100 ರೂ. ಹಾಗೂ 1,000 ರೂ.ಗಳ ಕೂಪನ್‌ಗಳನ್ನು ರಾಮಭಕ್ತರಿಗೆ ತಲುಪಿಸುವ ಮೂಲಕ ದೇಣಿಗೆ ಸ್ವೀಕರಿಸಲಾಗುವುದು ಎಂದವರು ಹೇಳಿದ್ದಾರೆ. (3ನೇ ಪುಟಕ್ಕೆ)


॥ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿ ಪ್ರಸನ್ನ ॥ ॥ ಶ್ರೀ ಉಚ್ಚಂಗೆಮ್ಮ ಪ್ರಸನ್ನ ॥

ವಿವಾಹ ಮಹೋತ್ಸವ ಆಮಂತ್ರಣ

ಶ್ರೀ ಶ್ರೀ ಶ್ರೀ ಜಗದ್ಗುರು ಪುರುಷೋತ್ತಮಾನಂದಪುರಿ ಮಹಾಸ್ವಾಮಿಗಳವರು
ಚಿನ್ಮೂಲಾದ್ರಿ, ಶಿಲಾಪುರಿ ಮಹಾಸಂಸ್ಥಾನ, ಭಗೀರಥ ಪೀಠ, ಬ್ರಹ್ಮವಿದ್ಯಾನಗರ, ಮಧುರೆ, ಹೊಸದುರ್ಗ ತಾಲ್ಲೂಕು ಇವರ ದಿವ್ಯ ಸಾನ್ನಿಧ್ಯದಲ್ಲಿ
ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದ ವಾಸಿ ಮಲೇರಪ್ಪ ಶ್ರೀ ಎಸ್. ಸಿದ್ದಪ್ಪ, ಶ್ರೀಮತಿ ಗಂಗಮ್ಮ ಇವರ ಮಗನಾದ
ಶ್ರೀ ಎಸ್. ಸಿದ್ದಲಿಂಗಪ್ಪ, ಶ್ರೀಮತಿ ಇಂದ್ರಮ್ಮ
ಮತ್ತು ರಟ್ಟಿಹಳ್ಳಿ ತಾಲ್ಲೂಕು ಚಿಕ್ಕಯಡಚಿ ಗ್ರಾಮದ ವಾಸಿ ಶ್ರೀ ತೀರ್ಥಪ್ಪ ದೊಡ್ಡ ಹನುಮಂತಪ್ಪ, ದಿ. ಶ್ರೀಮತಿ ಶಿವಕ್ಕ ಇವರ ಮಗನಾದ
ಶ್ರೀ ಬಸವಂತಪ್ಪ, ಶ್ರೀಮತಿ ರೇಣುಕಮ್ಮ ಇವರುಗಳು ಮಾಡುವ ವಿಜ್ಞಾಪನೆಗಳು.
ಸ್ವಸ್ತಿಶ್ರೀ ವಿಜಯಾಭ್ಯುದಯ ಶ್ರೀಮನ್ನೃಪ ಶಾಲಿವಾಹನ ಶಕೆ 1942ನೇ ಶ್ರೀ ಶಾರ್ವರಿನಾಮ ಸಂವತ್ಸರದ ಮಾರ್ಗಶಿರ ಮಾಸ ಶುಕ್ಲಪಕ್ಷ
ದಿನಾಂಕ 18.12.2020ನೇ ಶುಕ್ರವಾರ ಬೆಳಿಗ್ಗೆ 9-30 ರಿಂದ 10-10 ರವರೆಗೆ ಸಲ್ಲುವ ಮಕರ ಲಗ್ನದ ಶುಭ ಮುಹೂರ್ತದಲ್ಲಿ

ಶ್ರೀಮತಿ ಇಂದ್ರಮ್ಮ, ಶ್ರೀ ಎಸ್. ಸಿದ್ದಲಿಂಗಪ್ಪ ಇವರ ಸುಪುತ್ರ
ಚಿ॥ ರಾ॥ ಎಸ್. ಮಾಲತೇಶ್ M.Sc.

ಶ್ರೀಮತಿ ರೇಣುಕಮ್ಮ, ಶ್ರೀ ಬಸವಂತಪ್ಪ ಇವರ ಸುಪುತ್ರಿ
ಚಿ॥ ಕುಂ॥ ಸೌ॥ ಬಿ. ಭಾರತಿ B.A.

ಇವರ ವಿವಾಹ ಮಹೋತ್ಸವವನ್ನು ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ
ತಾವುಗಳು ಸಕುಟುಂಬ ಸಮೇತರಾಗಿ ಆಗಮಿಸಿ, ನೂತನ ವಧು-ವರರನ್ನು ಆಶೀರ್ವದಿಸಬೇಕಾಗಿ ಕೋರುವ.

ಆರತಕ್ಷತೆ : ದಿನಾಂಕ 17.12.2020ನೇ ಗುರುವಾರ ಸಂಜೆ 7.30 ರಿಂದ
ವಿವಾಹ : ದಿನಾಂಕ 18.12.2020ನೇ ಶುಕ್ರವಾರ ಬೆಳಿಗ್ಗೆ 9.30 ರಿಂದ 10.10 ರವರೆಗೆ ಸಲ್ಲುವ ಮಕರ ಲಗ್ನದಲ್ಲಿ
ವಿವಾಹ ಸ್ಥಳ :
ಶಿವ ಪಾರ್ವತಿ ಕಲ್ಯಾಣ ಮಂಟಪ
ದೇವರಾಜ ಅರಸು ಬಡಾವಣೆ, ದಾವಣಗೆರೆ.

ನಮ್ಮ ಮಾವನ ಮದುವೆಗೆ ಬನ್ನಿ... ಸಾನ್ವಿಕಾ, ರಚನಾ

ತಮ್ಮ ಆಗಮನಾಭಿಲಾಷಿಗಳು :
ಶ್ರೀಮತಿ ಇಂದ್ರಮ್ಮ, ಶ್ರೀ ಎಸ್. ಸಿದ್ದಲಿಂಗಪ್ಪ ಮತ್ತು ಸಹೋದರರು ಹಾಗೂ ಮಕ್ಕಳು, ದೊಡ್ಡಬಾತಿ.
ಶ್ರೀಮತಿ ರೇಣುಕಮ್ಮ, ಶ್ರೀ ಬಸವಂತಪ್ಪ ಸಹೋದರರು ಹಾಗೂ ಮಕ್ಕಳು, ಚಿಕ್ಕಯಡಚಿ.

ನಮ್ಮ ಅಣ್ಣನ ಮದುವೆಗೆ ಬನ್ನಿ... ಜಾಹ್ನವಿ ಯಶವಂತ್

ಇಂದ : ಶ್ರೀ ಎಸ್. ಸಿದ್ದಲಿಂಗಪ್ಪ
ಮಾಜಿ ಅಧ್ಯಕ್ಷರು, ಗ್ರಾ.ಪಂ. ದೊಡ್ಡಬಾತಿ ಹಾಗೂ ಮಾಜಿ ಅಧ್ಯಕ್ಷರು,
ದಾವಣಗೆರೆ ತಾಲ್ಲೂಕು ಉಪ್ಪಾರ ಸಂಘ, ದೊಡ್ಡಬಾತಿ, ದಾವಣಗೆರೆ ತಾಲ್ಲೂಕು & ಜಿಲ್ಲೆ.
ಮೊ. : 98809 97727, 63627 24238

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

# ಬಾಪೂಜಿ ಹಾಲ್ ಪುನರ್ ನಿರ್ಮಾಣಕ್ಕೆ ಪುರಸಭೆ ಸಮ್ಮತಿ



ಮಲೇಬೆನ್ನೂರು, ಡಿ.16- ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿನ ಬಾಪೂಜಿ ಹಾಲ್ ಕಟ್ಟಡವನ್ನು ಪುರಸಭೆಯ ಅನುದಾನದಲ್ಲಿ ಪುನರ್ ನಿರ್ಮಾಣ ಮಾಡುವಂತೆ ಸದಸ್ಯ ಬಿ.ಎಂ.ಚನ್ನೇಶ್ ಸ್ವಾಮಿ ಅವರು ಪ್ರಸ್ತಾಪಿಸಿದಾಗ ಸದಸ್ಯರೆಲ್ಲರೂ ಸಮ್ಮತಿ ಸೂಚಿಸಿದರು.

ಮಂಗಳವಾರ ಇಲ್ಲಿನ ಪುರಸಭೆಯ ಕೌನ್ಸಿಲ್ ಸಭಾಂಗಣದಲ್ಲಿ ಪುರಸಭೆ ಅಧ್ಯಕ್ಷರಾದ ಶ್ರೀಮತಿ ನಾಹೀದಾ ಅಂಜುಂ ಸೈಯದ್ ಇಸ್ರಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಪುರಸಭೆಯ ಸಾಮಾನ್ಯ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

2018-19 ಮತ್ತು 2019-2020ನೇ ಸಾಲಿನ 14ನೇ ಹಣಕಾಸು ಸಾಮಾನ್ಯ ಮೂಲ ಅನುದಾನದಡಿ ಒಟ್ಟು 51.57 ಲಕ್ಷ ರೂ. ವೆಚ್ಚದಲ್ಲಿ ಘನ ತ್ಯಾಜ್ಯ ವಸ್ತು ನಿರ್ವಹಣೆ ಹಾಗೂ ಘನ ತ್ಯಾಜ್ಯ ವಸ್ತು ವಿಲೇವಾರಿ ಜಾಗದ ಕಾಮಗಾರಿಯ ಬದಲಿಗೆ ಬದಲಿ ಕಾಮಗಾರಿ ಕೈಗೊಳ್ಳುವ ಬಗ್ಗೆ ಸಭೆಯಲ್ಲಿ ಮುಖ್ಯಾಧಿಕಾರಿ ಧರಣೇಂದ್ರಕುಮಾರ್ ವಿಷಯ ಪ್ರಸ್ತಾಪಿಸಿದರು.

ಆಗ ಸದಸ್ಯ ಬಿ.ಎಂ.ಚನ್ನೇಶ್ ಸ್ವಾಮಿ ಅವರು, ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರು ವಿಶ್ರಾಂತಿ ಪಡೆದಿದ್ದ ಬಾಪೂಜಿ ಹಾಲ್ ಕಟ್ಟಡವನ್ನು ಪುನರ್ ನಿರ್ಮಾಣ ಮಾಡಲು 14 ನೇ ಹಣಕಾಸಿನ 51.57 ಲಕ್ಷ ರೂ. ಅನುದಾನವನ್ನು ಬಳಸಿ ಎಂದಾಗ ಸಭೆ ಸರ್ವಾನುಮತದ ಒಪ್ಪಿಗೆ ನೀಡಿತು. ಈಗಿರುವ ಹಳೆಯ ಕಟ್ಟಡವನ್ನು ಕೆಡವಿ ಹೊಸ ಕಟ್ಟಡ ನಿರ್ಮಾಣ ಮಾಡಿ ಅದಕ್ಕೆ 'ಬಾಪೂಜಿ ಹಾಲ್' ಎಂದೇ ನಾಮಕರಣ ಮಾಡಿ. ಅದರಲ್ಲಿ ಡಿಜಿಟಲ್ ಗ್ರಂಥಾಲಯ ಮತ್ತು ಸ್ಥಳೀಯ ಪತ್ರಕರ್ತರ ಮನವಿ ಮೇರೆಗೆ ಪತ್ರಿಕಾ ಭವನಕ್ಕೆ ಅವಕಾಶ ಮಾಡಿಕೊಡೋಣ ಎಂದು ಚನ್ನೇಶ್ ಸ್ವಾಮಿ ಹೇಳಿದರು.

ಈ ಹಿಂದೆ 9.30 ಲಕ್ಷ ರೂ. ವೆಚ್ಚದಲ್ಲಿ ಬಾಪೂಜಿ ಹಾಲ್ ನವೀಕರಣಕ್ಕೆ ಟೆಂಡರ್ ಕರೆಯಲಾಗಿತ್ತು. ಆದರೆ, ಆ ಹಣದಲ್ಲಿ ಕಾಮಗಾರಿ ಪೂರ್ಣಗೊಳ್ಳುವುದಿಲ್ಲ ಎಂಬ ಕಾರಣಕ್ಕಾಗಿ ಟೆಂಡರ್ ರದ್ದು ಮಾಡಲಾಗಿದೆ ಎಂದು ಇಂಜಿನಿಯರ್ ನೌಷಾದ್ ಸಭೆಗೆ ತಿಳಿಸಿದರು.

**ದರ ನಿಗದಿ :** ಪಟ್ಟಣದಲ್ಲಿ ಸಕ್ಕಿಂಗ್ ಯಂತ್ರವನ್ನು ಬಳಕೆ ಮಾಡಿಕೊಳ್ಳುವ ಸಾರ್ವಜನಿಕರು 1 ಸಾವಿರ ರೂ. ನೀಡಬೇಕು ಮತ್ತು ಮುಕ್ತಿ ವಾಹನ ಬಳಸಿಕೊಳ್ಳುವವರು 500 ರೂ. ಬಾಡಿಗೆ ನೀಡಬೇಕೆಂಬ ನಿರ್ಧಾರವನ್ನು ಸಭೆಯಲ್ಲಿ ಕೈಗೊಳ್ಳಲಾಯಿತು.

**549 ಜನನ :** ಪಟ್ಟಣದಲ್ಲಿ 2019 ಡಿಸೆಂಬರ್‌ನಿಂದ 2020 ನವೆಂಬರ್‌ವರೆಗೆ 282 ಗಂಡು ಮಕ್ಕಳು ಹಾಗೂ 267 ಹೆಣ್ಣು ಮಕ್ಕಳು ಜನನವಾಗಿವೆ ಮತ್ತು 138 ಜನ ಮರಣ ಹೊಂದಿದ್ದಾರೆ ಎಂದು ಆರೋಗ್ಯಾಧಿಕಾರಿ ಗುರುಪ್ರಸಾದ್ ಸಭೆಗೆ ಮಾಹಿತಿ ನೀಡಿದರು.

ಕಸ ಹಾಕಲು ಜಾಗದ ಸಮಸ್ಯೆ ಇದ್ದು, ಈ ಬಗ್ಗೆ ಕೂಡಲೇ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡೋಣ ಎಂದು ಸದಸ್ಯ ಬಿ.ಸುರೇಶ್ ಹೇಳಿದರು.ಮುಖ್ಯಾಧಿಕಾರಿ ಧರಣೇಂದ್ರಕುಮಾರ್ ಮಾತನಾಡಿದರು.

ಉಪಾಧ್ಯಕ್ಷರಾದ ಅಂಜಿನಮ್ಮ ವಿಜಯ ಕುಮಾರ್, ಸದಸ್ಯರಾದ ಎ.ಆರೀಫ್ ಅಲಿ, ಮಾಸಣಗಿ ಶೇಖರಪ್ಪ, ಮಹಾಂತೇಶ್ ಸ್ವಾಮಿ, ಯುಸೂಫ್, ದಾದಾವಲಿ, ಸುಬ್ಬಿ ರಾಜಪ್ಪ, ಶಮೀಮ್ ಬಾನು, ಶ್ರೀಮತಿ ಮತಿ ಪಾನಿಪುರಿ ರಂಗನಾಥ್, ಶ್ರೀಮತಿ ಶಶಿಕಲಾ ಕೇಶವಾಚಾರಿ, ಸಾಕಮ್ಮ ರವಿ ಕುಮಾರ್, ಪುರಸಭೆ ಅಧಿಕಾರಿಗಳಾದ ಉಮೇಶ್, ದಿನಕರ್, ಗಣೇಶ್, ಪ್ರಭು, ನವೀನ್, ಇಮ್ರಾನ್, ಜಗದೀಶ್ ಮತ್ತಿತರರು ಸಭೆಯಲ್ಲಿ ಹಾಜರಿದ್ದರು.

# ಶಿಕ್ಷಕರ ಚುನಾವಣೆ : ಪ್ರಗತಿಪರ ಶಿಕ್ಷಕರ ವೇದಿಕೆಯ ಎಲ್ಲಾ ಅಭ್ಯರ್ಥಿಗಳ ಗೆಲುವು


ಹರಪನಹಳ್ಳಿ

ಹರಪನಹಳ್ಳಿ, ಡಿ.16- ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಕಾರ್ಯಕಾರಿ ಸಮಿತಿ ಚುನಾವಣೆ ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಆವರಣದಲ್ಲಿ ನಡೆದಿದ್ದು, ಪ್ರಗತಿಪರ ಶಿಕ್ಷಕರ ವೇದಿಕೆಯಿಂದ ಸ್ಪರ್ಧಿಸಿದ್ದ ಎಲ್ಲಾ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ.

ಒಟ್ಟು 25 ಸ್ಥಾನಗಳಲ್ಲಿ 17 ಸಾಮಾನ್ಯ ಹಾಗೂ 8 ಮಹಿಳಾ ಸ್ಥಾನಗಳಿಗೆ ಚುನಾವಣೆ ನಡೆದಿದ್ದು, ಇದರಲ್ಲಿ ಪ್ರಗತಿಪರ ಶಿಕ್ಷಕರ ವೇದಿಕೆಯಿಂದ ಎಲ್ಲಾ 25 ಸ್ಥಾನಗಳಿಗೂ ಸ್ಪರ್ಧಿಸಿದ್ದರೆ, ಕ್ರಿಯಾ ಶೀಲ ಒಕ್ಕೂಟದಿಂದ ಒಬ್ಬ ಮಹಿಳೆ ಹಾಗೂ 5 ಸಾಮಾನ್ಯ ಕ್ಷೇತ್ರಗಳಿಗೆ ಸೇರಿ ಕೇವಲ 6 ಸ್ಥಾನಗಳಿಗೆ ಮಾತ್ರ ಸ್ಪರ್ಧಿಸಲಾಗಿತ್ತು. ಮತದಾರರ ಪಟ್ಟಿಯಲ್ಲಿ ಒಟ್ಟು 1230 ಮತಗಳು ಇದ್ದು, ಅದರಲ್ಲಿ ವರ್ಗಾವಣೆ ಹಾಗೂ ಬಡ್ತಿಯಿಂದ ಹೋಗಿರುವ ಶಿಕ್ಷಕರನ್ನು ಹೊರತು ಪಡಿಸಿ ಉಳಿದ 1063 ಮತಗಳು ಅರ್ಹ ಮತಗಳಾಗಿದ್ದವು. ಅದರಲ್ಲಿ 873 ಮತಗಳು ಚಲಾವಣೆಗೊಂಡಿವೆ.

ಕಣದಲ್ಲಿದ್ದ ಪ್ರಗತಿಪರ ಶಿಕ್ಷಕರ ವೇದಿಕೆ ಹಾಗೂ ಕ್ರಿಯಾ ಶೀಲ ಶಿಕ್ಷಕರ ಒಕ್ಕೂಟದ ಅಭ್ಯರ್ಥಿಗಳ ಪೈಕಿ ಪ್ರಗತಿಪರ ಶಿಕ್ಷಕರ ವೇದಿಕೆಯ ಎಲ್ಲಾ ಅಭ್ಯರ್ಥಿಗಳು ಗೆಲುವಿನ ನಗೆ ಬೀರಿದರು. ಕ್ರಿಯಾ ಶೀಲ ಶಿಕ್ಷಕರ ಒಕ್ಕೂಟದ ಅಭ್ಯರ್ಥಿಗಳು ಪರಾಭವಗೊಂಡಿದ್ದರು.

ಬಿಸಿಯೂಟ ಸಹಾಯಕ ನಿರ್ದೇಶಕ ಎಲ್. ಆರ್. ಜಯರಾಜ್ ಚುನಾವಣಾ ಅಧಿಕಾರಿಯಾಗಿ, ಸಹಾಯಕ ಚುನಾವಣಾ ಅಧಿಕಾರಿಗಳಾಗಿ ಎನ್.ವಿ. ಹನುಮಂತರಾವ್, ಉದಯಶಂಕರ್, ಎಲ್.ಚಂದ್ರಶೇಖರ್ ಕಾರ್ಯ ನಿರ್ವಹಿಸಿದರು.

ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಕಾರ್ಯಕಾರಿ ಸಮಿತಿ ಚುನಾವಣೆ ಯಾವ ಪುರಸಭೆ, ಜಿ.ಪಂ., ತಾ.ಪಂ. ಚುನಾವಣೆಗಳಿಗಿಂತಲೂ ಕಡಿಮೆ ಇಲ್ಲ ಎನ್ನುವಂತಿತ್ತು.

# ಲಿಂಗ ಭೇದವಿಲ್ಲದ ಜೀವನಾಂಶ

**(1ನೇ ಪುಟದಿಂದ)** ನಾಗರಿಕರಿಗೂ ಸಮಾ ನವಾಗಿ ಜೀವನಾಂಶದ ನಿಯಮಗಳು ಅನ್ವಯವಾಗು ವಂತೆ ಮಾಡಬೇಕು ಎಂದು ಅರ್ಜಿಯಲ್ಲಿ ಕೋರ ಲಾಗಿದೆ. ಮತಗಳಲ್ಲಿ ಲಿಂಗ ಭೇದ ಪರಿಗಣಿಸಬಹುದು. ಆದರೆ, ಸಂವಿಧಾನದಲ್ಲಿ ಮಹಿಳೆಯನ್ನು ಭಿನ್ನವಾಗಿ ಕಾಣುವಂತೆ ಮಾಡಬಾರದು ಎಂದು ವಕೀಲೆ ಅರೋರಾ ವಾದ ಮಂಡಿಸಿದ್ದಾರೆ.

ಹಿಂದೂ ಹಾಗೂ ಮುಸ್ಲಿಮ್ ಮಹಿಳೆಯರ ಪ್ರಕರಣಗಳಲ್ಲಿ ಜೀವನಾಂಶದ ಹೋಲಿಕೆ ಮಾಡುವುದರ ಬಗ್ಗೆ ನ್ಯಾಯಾಲಯ ಕೇಳಿದ ಪ್ರಶ್ನೆಗೆ ಅವರು ಈ ಉತ್ತರ ನೀಡಿದ್ದಾರೆ. ಸಂವಿಧಾನದಲ್ಲಿರುವ ಹಲವಾರು ಅಂಶಗಳನ್ನು ಪ್ರಸ್ತಾಪಿಸಿರುವ ಹಿರಿಯ ವಕೀಲೆ, ಸರ್ಕಾರ ಈ ಬಗ್ಗೆ ವಿಶೇಷ ಶಾಸನ ರೂಪಿಸಬಹುದಾಗಿದೆ ಎಂದಿದ್ದಾರೆ.


ಲಿಂಗ ಹಕ್ಕುಗಳ ವಿಷಯಕ್ಕೆ ಸಂಬಂಧಿಸಿದಂತೆ ಶಾಸನ ರೂಪಿಸುವುದು ತೀರಾ ವಿಳಂಬವಾಗಿದೆ. ಈ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ಎದುರು ಬಂದಾಗ ನ್ಯಾಯಾಲಯ ಹಲವಾರು ಆದೇಶಗಳನ್ನು ಹೊರಡಿಸಿದೆ ಎಂದು ವಕೀಲೆ ಅರೋರಾ ತಿಳಿಸಿದ್ದಾರೆ. ನಾವು ಏನು ಮಾಡಿದ್ದೇವೆ ಹಾಗೂ ಏನು ಮಾಡಿಲ್ಲ ಎಂಬುದರ ಬಗ್ಗೆ ತಿಳಿದಿದೆ ಎಂದು ಹೇಳಿರುವ ನ್ಯಾಯಾಲಯ, ನಾವು ಶುದ್ಧವಾದ ಕಾನೂನು ಪ್ರಶ್ನೆಗಳನ್ನಷ್ಟೇ ಕೇಳುತ್ತಿದ್ದೇವೆ. ನಿರ್ದಿಷ್ಟ ಮತವೊಂದು ವಿಚ್ಛೇದನಕ್ಕೆ ಒಪ್ಪಿಕೊಳ್ಳುವ ಆಧಾರದ ಬಗ್ಗೆ ಕೇಳುತ್ತಿದ್ದೇವೆ ಎಂದು ತಿಳಿಸಿತು.

ಮತಗಳ ಪದ್ಧತಿಗಳನ್ನು ಅನುಸರಿಸುವುದು ಬೇರೆ ವಿಷಯ. ಆದರೆ, ಮೂಲಭೂತ ಹಕ್ಕುಗಳನ್ನು ರಕ್ಷಿಸಬೇಕಿದೆ. ಮತಗಳಿಂದಾಗಿ ಮೂಲಭೂತ ಹಕ್ಕುಗಳ ದಮನವಾದಾಗ ಅಂತಹದಕ್ಕೆ ಅವಕಾಶ ಇರಬಾರದು ಎಂದು ವಕೀಲೆ ವಾದ ಮಂಡಿಸಿದ್ದಾರೆ.

ಜೀವನಾಂಶವು ಬದುಕಲು ಇರುವ ಏಕೈಕ ಆಧಾರ. ಹೀಗಾಗಿ ಇದರಲ್ಲಿ ಮತ, ಜನಾಂಗ, ಜಾತಿ, ಲಿಂಗ ಇಲ್ಲವೇ ಜನನದ ಸ್ಥಳದ ಆಧಾರದ ಮೇಲೆ ವ್ಯತ್ಯಾಸ ಮಾಡಬಾರದು. ಹಾಗೆ ಮಾಡಿದರೆ ಅದು ಸಂವಿಧಾನದ 21ನೇ ವಿಧಿಯ ಅನ್ವಯ ನೀಡಲಾಗಿರುವ ಜೀವನದ ಹಕ್ಕು, ಸ್ವಾತಂತ್ರ್ಯ ಹಾಗೂ ಘನತೆಯ ಉಲ್ಲಂಘನೆ ಎಂದು ಅರ್ಜಿದಾರರು ವಾದಿಸಿದ್ದಾರೆ.

ಹಿಂದೂಗಳು, ಬೌದ್ಧರು, ಸಿಖ್ಖರು ಹಾಗೂ ಜೈನರು ಹಿಂದೂ ವಿವಾಹ ಕಾಯ್ದೆಯಡಿ ಬರುತ್ತಾರೆ. ಮುಸ್ಲಿಮ್, ಕ್ರಿಶ್ಚಿಯನ್ ಹಾಗೂ ಪಾರ್ಸಿಗಳಿಗೆ ಪ್ರತ್ಯೇಕ ವಿವಾಹ ಸಂಬಂಧಿ ಕಾಯ್ದೆಗಳಿವೆ.

## ಶಿಕ್ಷಕರ ಸಂಘದ ಚುನಾವಣೆ: ಮತ್ತೆ ಅಧಿಕಾರಕ್ಕೆ ಹೋರಾಟ ಸಮಿತಿ


ರಾಣೇಬೆನ್ನೂರು

ರಾಣೇಬೆನ್ನೂರು, ಡಿ.16- ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಣೇಬೆನ್ನೂರು ತಾಲ್ಲೂಕು ಘಟಕದ ಚುನಾವಣೆಯಲ್ಲಿ ಕಳೆದ ಎರಡು ಅವಧಿಯಿಂದ ಅಧಿಕಾರದಲ್ಲಿರುವ ಹೋರಾಟ ಸಮಿತಿ ಭರ್ಜರಿ ಜಯ ಗಳಿಸಿದ್ದು ಮತ್ತೆ ಅಧಿಕಾರ ಹಿಡಿದಿದೆ. ಒಟ್ಟು19 ರಲ್ಲಿ ಹಾಲಿ ಅಧ್ಯಕ್ಷ ಬಿ.ಪಿ. ಶಿಡೇನೂರ ನೇತೃತ್ವದ ಹೋರಾಟ ಸಮಿತಿಯ 17 ಹಾಗೂ ಎದುರಾಳಿ ಕ್ರಿಯಾ ಸಮಿತಿಯ ಈರ್ವರೂ ಆಯ್ಕೆಯಾಗಿದ್ದಾರೆ.ಶಿವಾನಂದಬಾಗಾದಿಅವರು ಚುನಾವಣಾಧಿಕಾರಿಯಾಗಿದ್ದರು.

ಹೋರಾಟ ಸಮಿತಿಯಿಂದ ಕೆ. ವಿ. ಕಾಟಣ್ಣನವರ, ರವಿ ಗೋಣೆಪ್ಪನವರ, ಬಿ.ಪಿ. ಶಿಡೇನೂರ, ಸುರೇಶ ಕೋಟಿಹಾಳ, ಎಸ್.ಹೆಚ್. ಮೇಟಿ, ಎಸ್.ಕೆ. ಹೇಮಂತ್, ಅಶೋಕ ಲಕ್ಕಪ್ಪಳವರ, ಎಚ್.ಎಂ. ಸುತಾರಾ, ಫಕ್ಕೀರಪ್ಪ ಬೀರಜ್ಜನವರ, ಎನ್.ಎಂ. ಚವಡಣ್ಣನವರ, ಜಗದೀಶ್ ಕೃಷ್ಣಪ್ಪನವರ, ಗೀತಾ ಅಜ್ಜಿವಡಿಮಠ, ಸಾವಕ್ಕ ಮಲ್ಲನಗೌಡ್ರ, ಎ.ಎಸ್. ಕಟಗಿ, ಲಲಿತಾ ಶಾಮನೂರ, ಸರೋಜಿನಿ ಭರಮಗೌಡ್ರ, ವಿಮಲಾ ಶಿಡಗನಾಳ ಹಾಗೂ ಕ್ರಿಯಾ ಸಮಿತಿಯಿಂದ ಎನ್. ಎಚ್. ದೇವಾಂಗದ ಮತ್ತು ಜಿ.ಎಲ್. ಪದಕಿ ಆಯ್ಕೆಯಾಗಿದ್ದಾರೆ.

## ಹರಿಹರ : ಬೆಂಕಿಗೆ ಗುಡಿಸಲು ಭಸ್ಮ

ಹರಿಹರ, ಡಿ.16- 14ನೇ ವಾರ್ಡ್ ಕಾಳಿದಾಸ ನಗರದ ಮಂಜುನಾಥ್ ಎಂಬಾತನಿಗೆ ಸೇರಿದ ಗುಡಿಸಲಿಗೆ ಬೆಳಗಿನ ಜಾವ ಬೆಂಕಿ ಬಿದ್ದು, ಸುಟ್ಟಿದೆ. ಸ್ಥಳಕ್ಕೆ ತಹಶೀಲ್ದಾರ್ ಕಚೇರಿ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

# ಲೋಕ್ ಅದಾಲತ್‌ನಲ್ಲಿ ಭಾಗವಹಿಸಿ ಸೌಹಾರ್ದತೆ ಬದುಕು ಸಾಗಿಸಬೇಕು

**ಜಗಳೂರಿನ ನ್ಯಾ. ಜಿ.ತಿಮ್ಮಯ್ಯ ಸಲಹೆ**

ಜಗಳೂರು, ಡಿ.16 - ಪಟ್ಟಣದ ನ್ಯಾಯಾಲಯದಲ್ಲಿ ಇದೇ ದಿನಾಂಕ 19 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ರವರೆಗೆ ವಿಡಿಯೋ ಕಾನ್ಫರೆನ್ಸ್, ವಿಡಿಯೋ ಕಾಲ್ ಹಾಗೂ ಕೋವಿಡ್ ಟೆಸ್ಟ್ (RAT) ಮೂಲಕ ಬೃಹತ್ ಲೋಕ್ ಅದಾಲತ್ತನ್ನು ಹಮ್ಮಿಕೊಂಡಿದ್ದು, ಪಕ್ಷಗಾರರು ಸದುಪಯೋಗ ಪಡೆದುಕೊಳ್ಳಬೇಕು ಎಂದು ಜೆಎಂಎಫ್ ಸಿ ಮತ್ತು ಸಿವಿಲ್ ನ್ಯಾಯಾಧೀಶ ಜಿ.ತಿಮ್ಮಯ್ಯ ಸಲಹೆ ನೀಡಿದರು. ಪಟ್ಟಣದ ಕೋರ್ಟ್ ಆವರಣದಲ್ಲಿ ನಡೆದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ಕಳೆದ ಸೆ.19ರಂದು ನಡೆದ ಇ-ಲೋಕ್ ಅದಾಲತ್‌ನಲ್ಲಿ ಜಗಳೂರು ನ್ಯಾಯಾಲಯದಲ್ಲಿ ಒಟ್ಟು 635 ಪ್ರಕರಣಗಳು ಇತ್ಯರ್ಥಗೊಂಡು ರೂ.23.46 ಲಕ್ಷ ಪರಿಹಾರವನ್ನು ಸಂಬಂಧಪಟ್ಟ ಕಕ್ಷಿದಾರರು ಪಡೆದಿರುತ್ತಾರೆ. ಈ ಬಾರಿಯೂ ವಕೀಲರ ಸಂಘದ ಅಧ್ಯಕ್ಷರು ಪದಾಧಿಕಾರಿಗಳು, ಹಿರಿಯ ಸದಸ್ಯರ, ಅಭಿಯೋಜಕರ ಹಾಗೂ ಸರ್ವರ ಸಹಕಾರದಿಂದ ರಾಜೀ ಸಂಧಾನದಲ್ಲಿ ಜಿಲ್ಲೆಯಲ್ಲಿಯೇ ಪ್ರಥಮ ಸ್ಥಾನ ಗಳಿಸುವ ಸಂಕಲ್ಪ ಹೊಂದಲಾಗಿದೆ ಎಂದು ಹೇಳಿದರು.

ಲೋಕ್ ಅದಾಲತ್‌ನಲ್ಲಿ ಚಾಲ್ತಿ ಪ್ರಕರಣಗಳ ನ್ಯಾಯಾಲಯದ ಸಂಪೂರ್ಣ ಶುಲ್ಕ ಮರುಪಾವತಿಸಲಾಗುವುದು, ವ್ಯಾಜ್ಯ ಪೂರ್ವ ಪ್ರಕರಣಗಳಿಗೆ ನ್ಯಾಯಾಲಯದ ಶುಲ್ಕ ಪಾವತಿಸುವಂತಿಲ್ಲ ಹಾಗೂ ಇಲ್ಲಿ ಇತ್ಯರ್ಥವಾಗುವ ಪ್ರಕರಣಗಳಿಗೆ ಮೇಲ್ಮನವಿಗೆ ಅವಕಾಶವಿರುವುದಿಲ್ಲ. ಅಲ್ಲದೆ ಉಭಯ ಪಕ್ಷಗಾರರೇ ನೇರವಾಗಿ ಅಥವಾ ವಕೀಲರ ಮುಖಾಂತರ ಭಾಗವಹಿಸಬಹುದು ರಾಜೀ ಮಾಡಿಕೊಳ್ಳಲು ಮಾರ್ಗದರ್ಶನ ಮಾಡಲಾಗು ವುದು. ತಾಲ್ಲೂಕಿನ ಬಡಜನರಿಗೆ ಹಣ, ಸಮಯದ ವಿಳಂಬ ಉಳಿತಾಯವಾಗಿ ಬಾಂಧವ್ಯ ಹೆಚ್ಚಿಸಿಕೊಂಡು ಸೌಹಾರ್ದಯುತ ಬದುಕಿಗೆ ಪ್ರಯೋಜನಕಾರಿಯಾಗಲಿದೆ ಎಂದು ಕಿವಿಮಾತು ಹೇಳಿದರು.

ವ್ಯಾಜ್ಯ ಪೂರ್ವ ಪ್ರಕರಣಗಳಾದ ಚೆಕ್ಕು ಅಮಾನ್ಯದ ಪ್ರಕರಣ, ಬ್ಯಾಂಕ್ ವಸೂಲಾತಿ ಪ್ರಕರಣ, ಕೈಗಾರಿಕೆಗಳಲ್ಲಿನ ವಿವಾದಗಳು ಹಾಗೂ ರಾಜಿಯಾಗಬಲ್ಲ ಅಪರಾಧಿಕ, ಚೆಕ್ಕು ಅಮಾನ್ಯದ, ಬ್ಯಾಂಕ್, ಮೋಟಾರ್ ಅಪಘಾತ ಪರಿಹಾರ ನ್ಯಾಯಾಧೀಕರಣ, ವಿದ್ಯುತ್ ಹಾಗೂ ನೀರಿನ ಶುಲ್ಕಗಳ, ವೈವಾಹಿಕ/ಕುಟುಂಬ ನ್ಯಾಯಾಲಯ, ಭೂಸ್ವಾಧೀನ, ವೇತನ ಮತ್ತು ಭತ್ಯೆಗಳಿಗೆ ಸಂಬಂಧಿಸಿದ ಮತ್ತು ಪಿಂಚಣಿ, ಕಂದಾಯ, ಸಿವಿಲ್ ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಲೋಕ್ ಅದಾಲತ್‌ನಲ್ಲಿ ಇತ್ಯರ್ಥಗೊಳಿಸಲು ಪರಿಗಣಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಸರ್ಕಾರಿ ಸಹಾಯಕ ಅಭಿಯೋಜಕರಾದ ರೂಪ ಉಪಸ್ಥಿತರಿದ್ದರು.

## ಸದಸ್ಯರೂ ಅವಿರೋಧ

**(1ನೇ ಪುಟದಿಂದ)** ಪಂ. ಸದಸ್ಯರೂ, ಮಾಜಿ ಉಪಾಧ್ಯಕ್ಷರೂ ಆದ ಕೆ.ಬಿ. ಪರಮೇಶ್ವರಪ್ಪ ಹಾಗೂ ಗ್ರಾಮದ ಮುಖಂಡ ಕೆ.ಜಿ. ಮಲ್ಲಿಕಾರ್ಜುನ್ ಮುಂತಾದವರ ನೇತೃತ್ವದಲ್ಲಿ ಅವಿರೋಧ ಆಯ್ಕೆ ನಡೆದಿದೆ ಎಂದು ಕೆ.ಜಿ. ಈಶ್ವರಪ್ಪ ತಿಳಿಸಿದ್ದಾರೆ.

## ಸಮಿತಿ ರಚನೆ

**(1ನೇ ಪುಟದಿಂದ)** ಶೀಘ್ರದಲ್ಲೇ ರಾಷ್ಟ್ರೀಯ ವಿಷಯವೂ ಆಗಬಹುದು. ದೇಶದ ಉಳಿದ ಭಾಗಗಳ ರೈತ ಸಂಘಟನೆಗಳ ಪ್ರತಿನಿಧಿಗಳೂ ಇರಬೇಕು. ನೀವು ಸಮಿತಿಗಳ ಸದಸ್ಯರ ಪಟ್ಟಿ ಕೊಡಿ ಎಂದು ನ್ಯಾಯಾಲಯ ಹೇಳಿದೆ. ಪೀಠದಲ್ಲಿ ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಹಾಗೂ ವಿ. ರಾಮಸುಬ್ರಮಣ್ಯಂ ಅವರಿದ್ದಾರೆ.

ಕೃಷಿ ಕಾಯ್ದೆಗಳ ವಿರುದ್ಧ ರೈತ ಸಂಘಟನೆಗಳು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿವೆ. ಮತ್ತೊಂದೆಡೆ ಪ್ರತಿಭಟನಾ ನಿರತ ರೈತರಿಂದ ಸಂಚಾರಕ್ಕೆ ತೊಂದರೆಯಾಗುತ್ತಿದೆ ಹಾಗೂ ಕೊರೊನಾ ಪ್ರಕರಣಗಳು ಹೆಚ್ಚಾಗುವ ಅಪಾಯವಿರುವುದರಿಂದ ಅವರನ್ನು ತೆರವುಗೊಳಿಸಬೇಕೆಂದೂ ಅರ್ಜಿಗಳು ದಾಖಲಾಗಿವೆ.

ವಿಡಿಯೋ ಕಾನ್ಫರೆನ್ಸ್ ಮೂಲಕ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯ, ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಿದೆ.

## ಸಚಿವ ದರ್ಜೆ

**(1ನೇ ಪುಟದಿಂದ)** ಕಳಕಪ್ಪ ಬಂಡಿ, ಶಂಕರ್ ಪಾಟೀಲ್ ಮುನೇನಕೊಪ್ಪ ಹಾಗೂ ಸಿದ್ದು ಸವದಿ ಅವರು ಸಂಪುಟ ದರ್ಜೆ ಸ್ಥಾನ ಪಡೆದುಕೊಂಡಿರುವ ಇತರೆ ಶಾಸಕರು. ರಾಜ್ ಕುಮಾರ್ ಪಾಟೀಲ್ ಹಾಗೂ ಎ. ಎಸ್. ಜಯರಾಮ್ ಅವರು ರಾಜ್ಯ ಸಚಿವ ಸ್ಥಾನ ಪಡೆದುಕೊಂಡಿದ್ದಾರೆ.


**ಸೈಟ್‌ಗಳು ಮಾರಾಟಕ್ಕಿವೆ**
ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್ ದಾಟಿ ಹೊಸ ಬನಶಂಕರಿ ಲೇಔಟ್‌ನಲ್ಲಿ 30x50 West, 30x50 East, 40x45 East, 40x62 East, 30x40 West, 40 ಅಡಿ ರೋಡಿಗಿದೆ.
ಐನಹಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಬೇಕಾಗಿದ್ದಾರೆ**
ಕ್ಲೀನಿಂಗ್ ಕೆಲಸಕ್ಕೆ ಹೆಂಗಸರು ಬೇಕಾಗಿದ್ದಾರೆ. ಕೆಲಸದ ಸಮಯ ಬೆಳಿಗ್ಗೆ 9 ರಿಂದ ಸಂಜೆ 5 ರವರೆಗೆ ಸಂಬಳ : 6000/- ಇಚ್ಛೆಯುಳ್ಳವರು ಸಂಪರ್ಕಿಸಿ
82966 72274

**ಸೈಟು, ಮನೆ ಖರೀದಿಗೆ ಬೇಕಾಗಿದೆ**
ಕೇವಲ (1/2%) ಅರ್ಧ ಪರ್ಸೆಂಟ್ ಕಮೀಷನ್‌ಗೆ ನಾವು ನಿಮ್ಮ ಸೈಟು, ಮನೆ ಮಾರಿಸಿಕೊಡುತ್ತೇವೆ.
ಕಿರಣ್ ಬೂಸ್ನೂರ್ : 98440-63409
(ಸೈಟು, ಮನೆ ಮಾರುವವರಿಗೆ ಮಾತ್ರ ಅನ್ವಯಿಸುತ್ತದೆ, ಕೊಳ್ಳುವವರಿಗಲ್ಲ*)

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆ 30×40 ಪಶ್ಚಿಮ ಕುವೆಂಪು ಬಡಾವಣೆ ಮನೆಗಳು 20×48 ಪೂರ್ವ, ಆರ್.ಟಿ.ಓ. ರಿಂಗ್ ರೋಡ್ ಸರ್ಕಲ್ ಹತ್ತಿರ 40×60 ಮನೆ, ಪೂರ್ವ ದಿಕ್ಕು, ನಿಜಲಿಂಗಪ್ಪ ಬಡಾವಣೆ ಪಶ್ಚಿಮ-ಪೂರ್ವ ದಿಕ್ಕಿನ ಮನೆಗಳು/ಸೈಟುಗಳು, ಕುವೆಂಪು ಬಡಾವಣೆ ಉತ್ತರ 40×60, ಪಶ್ಚಿಮ, ಸಿದ್ದವೀರಪ್ಪ ಬಡಾವಣೆ ಪಶ್ಚಿಮ, 30×50 ಪೂರ್ವ, ವಿನೋಬನಗರ, ರಿಂಗ್ ರೋಡ್ ಹತ್ತಿರ, 30×40 ಉತ್ತರ.
ಕೊಡುವುದಕ್ಕೂ, ತೆಗೆದುಕೊಳ್ಳುವುದಕ್ಕೂ ಸಂಪರ್ಕಿಸಿ
ಸುರೇಶ್, 95911 60520
ಐಗೂರು ವಿಜಯ್‌ಕುಮಾರ್, 99457 02495

**ಸೈಟು ಮಾರಾಟಕ್ಕೆ (ಪಶ್ಚಿಮ)**
ಪಿ.ಬಿ. ರೋಡ್, ಜೈನ್ ಬಜಾಜ್ ಶೋ ರೂಂ ಹಿಂಭಾಗ 40x78 Industrial Convertion ಆಗಿರುವ ಸೈಟು (ಗೋಡೌನ್, ಸ್ಟಾಕ್ ಮಾಡಲು ಸೂಕ್ತವಾಗಿದೆ)
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409
(ನೇರವಾಗಿ ರಿಜಿಸ್ಟರ್ ಮಾಲೀಕರಿಂದ ನಮ್ಮ ವ್ಯಾಪಾರ)

**ಸೈಟ್‌ಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 30x36 ಉತ್ತರ, 40x50 ದಕ್ಷಿಣ, ಶಿವ ಪಾರ್ವತಿ ಬಡಾವಣೆಯಲ್ಲಿ 30x44 ಪೂರ್ವ, 30x56 ಪೂರ್ವ ಶಾಮನೂರು ಹತ್ತಿರ ಜೈನ್ ಸ್ಕೂಲ್ ಹಿಂಭಾಗ 30x50 ಕಾರ್ನರ್, ಪೂರ್ವ-ಉತ್ತರ
ಸ್ವಾಮಿ ಏಜೆಂಟ್ ವಿದ್ಯಾನಗರ
ಮೊ. 97421-44715
ಶಾಮನೂರು ನಾಗರಾಜ್
ಮೊ. 98448-83303

**ಮನೆಗಳು ಮಾರಾಟಕ್ಕಿವೆ**
ಎಸ್.ಎಸ್. 'ಬಿ' ಬ್ಲಾಕ್‌ನಲ್ಲಿ, ಕುವೆಂಪು ಬಡಾವಣೆಯಲ್ಲಿ, ಆಂಜನೇಯ ಬಡಾವಣೆಯಲ್ಲಿ 40x60 North, 35x46 ಕಾರ್ನರ್, 30x40 South, 30x50 South
ಐನಹಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ತಕ್ಷಣ ಬೇಕಾಗಿದ್ದಾರೆ**
IMPULSE ಕಂಪನಿಯ ದಾವಣಗೆರೆ ಹೊಸ ವಿಭಾಗಕ್ಕೆ 10th, PUC, ITI, Diploma, Any Degree ಆದ ಯುವಕರು Earn (8000-16000)PM, ವಯೋಮಿತಿ (18-23) ಸಂಪರ್ಕಿಸಿ:
97405 12356
81056 00262

**ಮನೆ ಬಾಡಿಗೆಗೆ**
ದಾವಣಗೆರೆ ನಗರದ ಎಂಸಿಸಿ 'ಬಿ' ಬ್ಲಾಕ್ ನ 6ನೇ ಮೇನ್ 6ನೇ ಕ್ರಾಸ್ ನಲ್ಲಿ ಡಬಲ್ ಬೆಡ್ ರೂಂನ ಮನೆ ಬಾಡಿಗೆಗೆ ಇದೆ. ವಿಚಾರಿಸಿ:
ಮೊ: 94803 89314

**ಕೆಲಸಕ್ಕೆ ಬೇಕಾಗಿದ್ದಾರೆ**
ಸಂಕೇಶ್ವರ ಇಂಡಸ್ಟ್ರೀಸ್, ಕರೂರು ಇಂಡಸ್ಟ್ರಿಯಲ್ ಏರಿಯಾ, ದಾವಣಗೆರೆಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಕೆಲಸದ ಸಮಯ 9 ತಾಸು, ತಿಂಗಳಿಗೆ 8 ರಿಂದ 9 ಸಾವಿರ ಸಂಬಳ + ಊಟ ಯುವಕರು ಮಾತ್ರ ಸಂಪರ್ಕಿಸಿ:
91135 06661
81055 94402

**ಮನೆ ಬಾಡಿಗೆಗೆ**
ದಾವಣಗೆರೆ ನಗರದ ತರಳಬಾಳು ಬಡಾವಣೆಯ 15ನೇ ಕ್ರಾಸ್ ನ ಮಾರುತಿ ಸ್ಕೂಲ್ ಹತ್ತಿರ ಎರಡನೇ ಫ್ಲೋರ್ ನಲ್ಲಿ ಸಿಂಗಲ್ ಬೆಡ್ ರೂಂನ ಮನೆ ಬಾಡಿಗೆಗೆ ಇದೆ. ವಿಚಾರಿಸಿ:
ಮೊ : 94816 72078

**ಸೈಟ್‌ಗಳು ಮಾರಾಟಕ್ಕಿವೆ**
ಮಹಾಲಕ್ಷ್ಮಿ ಲೇಔಟ್ ಸುತ್ತ-ಮುತ್ತ, ಲಕ್ಷ್ಮಿ ಹಾಸ್ಟೆಲ್ ಹತ್ತಿರ 30x50 ಪಶ್ಚಿಮ, 40x50 ಪಶ್ಚಿಮ ಉತ್ತರ ಕಾರ್ನರ್, ಬಾಟ್ಲಿ ಬಿಲ್ಡಿಂಗ್ ಹತ್ತಿರ 30x50 ಉತ್ತರ
ಶಾಮನೂರು ಧನ್ಯಕುಮಾರ್
ಮೊ. 97415-62589
ಸ್ವಾಮಿ ಏಜೆಂಟ್ ವಿದ್ಯಾನಗರ
ಮೊ. 97421-44715

**ಕುರಿ ಸಾಕಾಣಿಕೆ ಜಾಗ ಬಾಡಿಗೆಗೆ ದೊರೆಯುತ್ತದೆ**
ದೊಡ್ಡಬಾತಿ ಬಳಿ 3100 ಚ.ಅಡಿಯ ಶೆಡ್, 1.5 ಎಕರೆ ನೀರಾವರಿ ಜಮೀನು, ಬೋರ್‌ವೆಲ್ ನೀರಿನ ಅನೂಕೂಲವಿರುವ, ಕಾಂಕ್ರೀಟ್ ರಸ್ತೆ, ದಾವಣಗೆರೆ ಸಿಟಿಯಿಂದ 9 ಕಿ.ಮೀ ದೂರ ಈ ಎಲ್ಲಾ ಅನುಕೂಲತೆ ಇರುವ ಜಾಗ ಬಾಡಿಗೆಗೆ ದೊರೆಯುತ್ತದೆ.
94484 90778, 96867 62778

**ಬೇಕಾಗಿದ್ದಾರೆ**
ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ.
ತಕ್ಷಣ ಸಂಪರ್ಕಿಸಿ :
96117-44810

**ಬೇಕಾಗಿದ್ದಾರೆ**
ರೂಂ ಬಾಯ್ಸ್ ಕೆಲಸಕ್ಕಾಗಿ ಬೇಕಾಗಿದ್ದಾರೆ. ಸಂಪರ್ಕಿಸಿ:
ನ್ಯೂ ನಂದಿ ಲಾಡ್ಜ್
ಕೆ.ಆರ್. ರೋಡ್ LIC ಆಫೀಸ್ ಹತ್ತಿರ, ದಾವಣಗೆರೆ.
94482 65019, 08192 277187, 08192 276411
ಭೇಟಿಯ ಸಮಯ ಸಂಜೆ 4PM to 6PM

**ಸೈಟುಗಳು/ಹೊಲ ಮಾರಾಟಕ್ಕೆ**
ಬನಶಂಕರಿ ಲೇಔಟ್, ಜಯನಗರ, ಶಿವ-ಪಾರ್ವತಿ ಬಡಾವಣೆ
30x30, 30x50, 50x75, 40x60,
ಸೈಟ್‌ಗಳು, ಮನೆ ಮತ್ತು ಹೊಲ, ಬಂಗ್ಲೆ ಸೈಟುಗಳು, ಅಪಾರ್ಟ್‌ಮೆಂಟ್ ಸೈಟುಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.
ಅಭಿಷೇಕ್ ಅಫೇರ್, ಏಜೆಂಟ್
ಮೊ.97315 12365

**State Bank of India**
**ಗ್ರಾಹಕರ ಸೇವಾ ಕೇಂದ್ರದಲ್ಲಿ**
ಜನ್‌ಧನ್ ಖಾತೆ ಮಾಡಲಾಗುತ್ತದೆ ('0' Account Open)
# 264/1 ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
99806 10005

**ಮನೆ ಬಾಡಿಗೆಗೆ ಇದೆ**
2ನೇ ಮೇನ್, 5ನೇ ಕ್ರಾಸ್, ಲತಾ ಬೇಕರಿ ಹಿಂಭಾಗ, ಕೊಂಡಜ್ಜಿ ರಸ್ತೆ, ವಿಜಯನಗರ ಬಡಾವಣೆ, ದಾವಣಗೆರೆ.
63638 78892

**1BHK ಮನೆ ಬಾಡಿಗೆಗೆ ಇದೆ**
ನಿಜಲಿಂಗಪ್ಪ ಬಡಾವಣೆಯಲ್ಲಿ 2ನೇ ಫ್ಲೋರ್‌ನಲ್ಲಿ ಸುಸಜ್ಜಿತವಾದ ನೀರಿನ ಸೌಲಭ್ಯವುಳ್ಳ ಸಿಂಗಲ್ ಬೆಡ್‌ರೂಂ ಆರ್.ಸಿ.ಸಿ. ಮನೆ ಬಾಡಿಗೆಗೆ ಇದೆ. ಮನೆ ಮುಂದೆ ಶೀಟ್ಸ್ ಹಾಕಿಸಿದ್ದು ವಿಶಾಲವಾದ ಅಂಗಳವಿರುತ್ತದೆ.
ಸಂಪರ್ಕಿಸಿ:
91482 16470

**ಹಾಲ್ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು 18 ರಿಂದ 25 ವರ್ಷದೊಳಗಿನ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ.
ಸಂಪರ್ಕಿಸಿ :
98442-94446

**ತಿರು ಫಿಲಂ ಇನ್‌ಸ್ಟಿಟ್ಯೂಟ್**
ಆಕ್ಟಿಂಗ್ ಕೋರ್ಸ್ - 5000/-
ಡೈರೆಕ್ಷನ್ ಕೋರ್ಸ್ - 6000/-
ಎಡಿಟಿಂಗ್ ಕೋರ್ಸ್ - 7000/-
50% ಆನ್‌ಲೈನ್ ಕ್ಲಾಸೆಸ್
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
91104 16055
63632 18756

**ಬೇಕಾಗಿದ್ದಾರೆ**
ಪುರುಷರ / ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ.
62628 62622

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಶಿವಕುಮಾರಸ್ವಾಮಿ ಬಡಾವಣೆ, 2ನೇ ಹಂತದಲ್ಲಿ, ವಾಸ್ತು ಪ್ರಕಾರವುಳ್ಳ ಪೂರ್ವ-ಉತ್ತರದ ಕಾರ್ನರ್ ಸೈಟಿನಲ್ಲಿ ಕಟ್ಟಿರುವ ಮೊದಲನೇ ಮಹಡಿಯಲ್ಲಿ 2 ಬೆಡ್ ರೂಂವುಳ್ಳ ಪೂರ್ವ ದಿಕ್ಕಿನ ಮುಖ್ಯದ್ವಾರವುಳ್ಳ 24 ಗಂಟೆ ನೀರಿನ ಸೌಕರ್ಯವಿರುವ ಬಾಲ್ಕನಿ ಹೊಂದಿರುವ ಮನೆ ಬಾಡಿಗೆಗೆ ಇದೆ. ವಿಚಾರಿಸಿ (ಸಸ್ಯಹಾರಿಗಳಿಗೆ ಮಾತ್ರ)
94806 52219

**ಮನೆ ಲೀಸ್ ಇದೆ**
ಕೆ.ಟಿ.ಜೆ. ನಗರ 17ನೇ ಕ್ರಾಸ್, ಬನ್ನಿ ಮಹಾಂಕಾಳಿ ರೋಡ್‌ನಲ್ಲಿ 2 ಬೆಡ್‌ರೂಂವುಳ್ಳ ಮನೆ ಲೀಸ್‌ಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ
88673 32114
95355 10476

**ಬೇಕಾಗಿದ್ದಾರೆ**
ದಾವಣಗೆರೆಯ ಶರಭೇಶ್ವರ ಊಟದ ಹೋಟೆಲ್ ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಪರಸ್ಥಳದವರಿಗೆ ಉಚಿತ ಊಟ, ವಸತಿ ಸೌಲಭ್ಯ ಕಲ್ಪಿಸಲಾಗುವುದು. ಸಂಪರ್ಕಿಸಿ
94489 80070
78991 90070

**ಪ್ರವೇಶ ಪ್ರಕಟಣೆ**
SSLC ನೇರ ಪರೀಕ್ಷೆಗಳು
ಶಾಲೆ ಬಿಟ್ಟಿದ್ದೀರಾ? 7,8,9 ಪಾಸ್/ಫೇಲ್ (ಮಾನ್ಯತೆ ಪಡೆದ ಪರೀಕ್ಷಾ ಕೇಂದ್ರ, ಹೂವಿನಹಡಗಲಿ)
IInd PUC ನೇರ ಪರೀಕ್ಷೆ
ARTS/Commerce/Science
(ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ)
ಫೋಟೋ 6, ಟಿ.ಸಿ. ಒರಿಜಿನಲ್ ಹಾಲ್‌ಟಿಕೆಟ್, ಆಧಾರ್ ಕಾರ್ಡ್, ಝರಾಕ್ಸ್‌ನೊಂದಿಗೆ ಸಂಪರ್ಕಿಸಿ :
Holyfaith Educational Trust (R)
Opp. : New RTO Office, Near Airtel Tower Davangere/Harihar.
73493 97287/97417 46205

**ಬಾಡಿಗೆಗೆ ಇದೆ**
8ನೇ ಮೇನ್, 8ನೇ ಕ್ರಾಸ್, ಪಿ.ಜೆ. ಬಡಾವಣೆಯಲ್ಲಿ ಆಫೀಸ್, ಕ್ಲಿನಿಕ್‌ಗೆ 22x26 ಅಳತೆಯ ರೂಂ ಫಸ್ಟ್ ಫ್ಲೋರ್‌ನಲ್ಲಿ (ಬೆಳಗಾವಿ ಆರ್ಕೇಡ್) ಬಾಡಿಗೆಗೆ ಇದೆ.
97399 50780
82177 21635

**ಕೆಲಸಗಾರರು ಬೇಕಾಗಿದ್ದಾರೆ**
ವಿನಾಯಕ ಸಾರಿಗೆ ಸಂಸ್ಥೆಯಲ್ಲಿ ಚಾಲಕ ಹಾಗೂ ನಿರ್ವಾಹಕ ಹುದ್ದೆಗೆ ಕೆಲಸಗಾರರು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು (ಪುರುಷರಿಗೆ/ಮಹಿಳೆಯರಿಗೆ ಆದ್ಯತೆ)
94824 76109
91642 22937

**ಬೇಕಾಗಿದ್ದಾರೆ**
ಟೈರ್ ಶೋರೂಂನಲ್ಲಿ ಕೆಲಸ ಮಾಡಲು Diploma Mechanical ಆಗಿರುವವರು ಬೇಕಾಗಿದ್ದಾರೆ.
ನಂದಿ ಟೈರ್ ಪ್ಲಾನೆಟ್
95381 87385, 08192 261003
99161 43003

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
S.S.L.C., PUC, Technical & Non Technical Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ದಾವಣಗೆರೆ.
87490 24789, 94837 64859, 87620 58369
82173 02649, 80507 27467

**ಕೌಶಲ್ಯ ತರಬೇತಿ**
ವೇದಾಂತ ಫೌಂಡೇಷನ್ ವತಿಯಿಂದ S.S.L.C., PUC ಮತ್ತು ಯಾವುದೇ ಡಿಗ್ರಿ ಪಾಸ್ ಆದ ವಿದ್ಯಾರ್ಥಿಗಳಿಗೆ ಅವರ ಶಿಕ್ಷಣಕ್ಕೆ ಅನುಗುಣವಾಗಿ ಸ್ಕಿಲ್ ಟ್ರೈನಿಂಗ್ ನೀಡಿ ಅವರಿಗೆ ಹೆಸರಾಂತ ಕಂಪನಿಗಳಲ್ಲಿ JOb Placemnt (ಉದ್ಯೋಗ ಅವಕಾಶವನ್ನು) ಒದಗಿಸುತ್ತೇವೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
90667 66580, 85532 59527

**ಸೋಫಾ ಮೆಸ್ ಮಾಡುತ್ತೇವೆ**
ನಮ್ಮಲ್ಲಿ ಸೋಫಾ ಮೆಸ್, ಎಲ್ಲಾ ತರಹದ ಕುಷನ್ ಸೋಫಾ, ಎಲ್ಲಾ ಬೆಡ್ ಸ್ಪಾಂಜ್, ವುಡ್ ಪಾಲಿಶ್ ಮಾಡುತ್ತೇವೆ. ರಿಪೇರಿ ಸಹ ಮಾಡುತ್ತೇವೆ.
98452 79197, 74830 88761

**ಶ್ರೀ ಮೃತ್ಯುಂಜಯ ಸ್ಕೂಲ್ ಆಫ್ ನರ್ಸಿಂಗ್ & ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ ಸೈನ್ಸಸ್**
ಪ್ರವೇಶ ಪ್ರಾರಂಭ :
ಜಿ.ಎನ್.ಎಂ. (GNM), ಲ್ಯಾಬ್ (LAB), ಹೆಲ್ತ್ (Health) ಓಟಿ (OT)
ಪಿ.ಜೆ. ಬಡಾವಣೆ, ದಾವಣಗೆರೆ.
97432 10028, 94488 73558

**ಬೇಕಾಗಿದ್ದಾರೆ**
ಬೆಣ್ಣೆ ದೋಸೆ ಮಾಡುವರು ಬೇಕಾಗಿದ್ದಾರೆ. ಆಕರ್ಷಕ ಸಂಬಳ, ವಸತಿ ಸೌಲಭ್ಯ ನೀಡಲಾಗುವುದು. ಸಂಪರ್ಕಿಸಿರಿ
94495 58023

**ಬೇಕಾಗಿದ್ದಾರೆ**
ಫೋಟೋ ಸ್ಟುಡಿಯೋದಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
78995 55553

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡಿಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಭೂಮಿಕ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ, BIET ರೋಡ್ ಹೇಮಾವತಿ ಹಾಸ್ಟೆಲ್ ಹತ್ತಿರ, ದಾವಣಗೆರೆ.
www.bhoomikamatrimony.com
90080 55813

**ಉತ್ತಮ ಗುಣಮಟ್ಟದ ಕಡಿಮೆ ದರದಲ್ಲಿ**
ಎಂ.ಸ್ಯಾಂಡ್, ಜಲ್ಲಿ, ಗ್ರಾವೆಲ್ ದೊರೆಯುತ್ತದೆ.
ಸಂಪರ್ಕಿಸಿ:
ಪ್ರವೀಣ್‌ಕುಮಾರ್ ಎಸ್.ಕೆ.
90604 55766


**Simple vaastu**
ಸಿಂಪಲ್ ವಾಸ್ತು
98444 88838

**REQUIRED**
Marketing & Sales Person Requierd For Plywood Showroom
Contact :
98865 11185


## ರಫ್ತಿಗಾಗಿ 3,500 ಕೋಟಿ ಸಬ್ಸಿಡಿ

**(1ನೇ ಪುಟದಿಂದ)** ಸಚಿವ ಪ್ರಕಾಶ್ ಜಾವಡೇಕರ್, 60 ಲಕ್ಷ ಟನ್ ಸಕ್ಕರೆ ರಫ್ತಿಗಾಗಿ 3,500 ಕೋಟಿ ರೂ.ಗಳ ಸಬ್ಸಿಡಿಗೆ ಒಪ್ಪಿಗೆ ನೀಡಲಾಗಿದೆ ಎಂದಿದ್ದಾರೆ. ಸಕ್ಕರೆ ಮಿಲ್ಲುಗಳು ಹಾಗೂ ಕಬ್ಬು ಬೆಳೆಗಾರರಿಬ್ಬರೂ ಸಂಕಷ್ಟದಲ್ಲಿದ್ದಾರೆ. ದೇಶದಲ್ಲಿ 260 ಲಕ್ಷ ಟನ್ ಸಕ್ಕರೆ ಬೇಡಿಕೆ ಇದ್ದರೆ ಪೂರೈಕೆ 310 ಲಕ್ಷ ಟನ್ ಆಗಿದೆ ಎಂದು ಸಚಿವರು ಹೇಳಿದ್ದಾರೆ. ಸರ್ಕಾರ ರಫ್ತಿಗೆ ಸಬ್ಸಿಡಿ ನೀಡು ವುದರಿಂದ ಸಕ್ಕರೆ ಕಾರ್ಖಾನೆಗಳು ರೈತರ ಬಾಕಿ ಪಾವತಿಸಲು ಸಾಧ್ಯವಾಗಲಿದೆ. ಇದರಿಂದ ಐದು ಕೋಟಿ ರೈತರಿಗೆ ನೆರವು ತಲುಪುವ ನಿರೀಕ್ಷೆ ಇದೆ.

## ವ್ಯವಸ್ಥಾಪಕನ ಕಿರುಕುಳ : ಆತ್ಮಹತ್ಯೆ



ದಾವಣಗೆರೆ, ಡಿ.16- ತಾನು ಕರ್ತವ್ಯ ನಿರ್ವಹಿಸುತ್ತಿದ್ದ ಖಾಸಗಿ ಕಂಪನಿಯ ವ್ಯವಸ್ಥಾಪಕ ಕಿರುಕುಳ ನೀಡುತ್ತಿದ್ದನೆಂದು ಆರೋಪಿಸಿ ಉದ್ಯೋಗಿ ಯೋರ್ವ ಡೆತ್ ನೋಟ್ ಬರೆದಿಟ್ಟು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲ್ಲೂಕಿನ ಹಾಲುವರ್ತಿ ಗ್ರಾಮದಲ್ಲಿ ಇಂದು ನಡೆದಿದೆ.

ಹನುಮಂತ (24) ಆತ್ಮಹತ್ಯೆ ಮಾಡಿಕೊಂಡ ಯುವಕ. ನಗರದ ಖಾಸಗಿ ಕಂಪನಿ ಕಚೇರಿಯಲ್ಲಿ ಈತ ಉದ್ಯೋಗಿಯಾಗಿದ್ದ.

ರಿಲಯನ್ಸ್ ಡಿಜಿಟಲ್ ಕಂಪನಿಯಲ್ಲಿ ಕೆಲಸಕ್ಕೆ ಸೇರಿಕೊಂಡ ನಂತರ ಬದುಕು ಕಟ್ಟಿಕೊಂಡಿದ್ದೆ. ನನ್ನ ಕನಸು ಸಾಕಾರಗೊಳಿಸಲು ಪ್ರಾಮಾಣಿಕವಾಗಿ ದುಡಿಯುತ್ತಿದ್ದೆ. ಆದರೆ, ಅಲ್ಲಿನ ಮ್ಯಾನೇಜರ್ ಹಾಗೂ ಎಂಎಸ್ ತನಗೆ ಹಾಗೂ ಇತರರಿಗೆ ಕಿರುಕುಳ ನೀಡುತ್ತಿದ್ದರು. ತನಗೆ ಕೆಲಸ ಬಿಡುವಂತೆ ಮಾಡಿದ್ದು, ಇದರಿಂದ ಜೀವನ ನಿರ್ವಹಣೆಗೆ ತೊಂದರೆ, ಬೈಕ್‌ನ ಇಎಂಐ ಕಟ್ಟಲು ಸಹ ಕಷ್ಟವಾಗುವ ರೀತಿ ಮಾಡಿದ್ದರು. ಇದೇ ಕಾರಣಕ್ಕೆ ತಾನು ಆತ್ಮಹತ್ಯೆಗೆ ಶರಣಾಗುತ್ತಿದ್ದೇನೆ ಎಂದು ಹನುಮಂತ ಡೆತ್ ನೋಟ್ ನಲ್ಲಿ ಬರೆದಿದ್ದಾನೆ. ಈ ಸಂಬಂಧ ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸ್ಟೂಲ್ ಮೇಲಿಂದ ಬಿದ್ದು ಮಗು ಸಾವು

ದಾವಣಗೆರೆ, ಡಿ.16- ಸ್ಟೂಲ್ ಮೇಲಿನಿಂದ ಆಕಸ್ಮಿಕವಾಗಿ ಬಿದ್ದು ಮಗುವೊಂದು ಮೃತಪಟ್ಟಿರುವ ಘಟನೆ ಇಲ್ಲಿನ ಗಾಂಧಿನಗರ ಪೊಲೀಸ್ ಠಾಣಾ ವ್ಯಾಪ್ತಿಯ ಶಿವಾಜಿ ನಗರದ ತ್ಯಾಪೇರಗಲ್ಲಿ ಇಂದು ಬೆಳಿಗ್ಗೆ ನಡೆದಿದೆ.

ಖಾಸಗಿ ಬಸ್ ಏಜೆಂಟ್ ಲಕ್ಷ್ಮೀಕಾಂತ್ ಹಾಗೂ ಲೋಕೇಶ್ವರಿ ಅವರ ಪುತ್ರ ಸುಮಾರು ಒಂದೂವರೆ ವರ್ಷದ ರೋಹನ್ ಮೃತ ದುರ್ದೈವಿ.

ಲೋಕೇಶ್ವರಿ ಅವರು ತನ್ನ ಮಗ ರೋಹನ್ ನನ್ನು ಎದುರು ಮನೆಗೆ ಕರೆದುಕೊಂಡು ಹೋಗಿ ತಿಂಡಿ ತಿನ್ನಿಸುತ್ತಿದ್ದರು. ಮಗನಿಗೆ ನೀರು ತರಲು ಲೋಕೇಶ್ವರಿ ಎದ್ದು ಹೋದಾಗ ರೋಹನ್ ಅಲ್ಲೇ ಇದ್ದ ಸ್ಟೂಲ್ ಹತ್ತಲು ಹೋದಾಗ ಆಕಸ್ಮಿಕವಾಗಿ ಕಾಲು ಜಾರಿ ಕೆಳಗೆ ಬಿದ್ದು ತಲೆಗೆ ಒಳಪೆಟ್ಟಾಗಿದ್ದು, ತಕ್ಷಣವೇ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮಾರ್ಗ ಮಧ್ಯೆ ಮಗು ಮೃತಪಟ್ಟಿದೆ.

## ವಿದ್ಯುತ್ ಸ್ಪರ್ಶಿಸಿ ತರಗಾರನ ಸಾವು

ದಾವಣಗೆರೆ, ಡಿ.16- ಕೆಲಸ ಮಾಡುತ್ತಿದ್ದ ವೇಳೆ ವಿದ್ಯುತ್ ಸ್ಪರ್ಶಿಸಿ ತರಗಾರನೋರ್ವ ಮೃತಪಟ್ಟಿರುವ ಘಟನೆ ಮಲೇಬೆನ್ನೂರು ಪೊಲೀಸ್ ಠಾಣಾ ವ್ಯಾಪ್ತಿಯ ಹರಿಹರ ತಾಲ್ಲೂಕು ಭಾಸ್ಕರ್ ರಾವ್ ಕ್ಯಾಂಪ್ ನಲ್ಲಿ ಮಂಗಳವಾರ ನಡೆದಿದೆ. ಮಲೇಬೆನ್ನೂರಿನ ಇಂದಿರಾನಗರ ಸಾಧಿಕ್ ವುಲ್ಲಾ (38) ಮೃತನು. ತರಗಾರ ಕೆಲಸಕ್ಕಾಗಿ ಮನೆಯೊಂದಕ್ಕೆ ತೆರಳಿದ್ದಾಗ ಬೆಳಕು ಕಡಿಮೆ ಇದ್ದ ಕಾರಣ ಬೆಳಕಿಗಾಗಿ ಸ್ವಿಚ್ ಹಾಕಲು ಹೋಗಿದಾಗ ವಿದ್ಯುತ್ ಶಾಕ್ ಹೊಡೆದು ಮೃತಪಟ್ಟಿದ್ದಾನೆ.


## ನಿರಾಶ್ರಿತರಿಗೆ ಹಾಸಿಗೆ, ಹೊದಿಕೆ ವಿತರಣೆ

# ಮಾನವೀಯತೆ ಮೆರೆದ ಪೊಲೀಸರು



ದಾವಣಗೆರೆ, ಡಿ.16- ರಸ್ತೆ ಬದಿಯಲ್ಲಿ ಮಲಗುವ ನಿರಾಶ್ರಿತರಿಗೆ ಹಾಸಿಗೆ, ಹೊದಿಕೆಗಳನ್ನು ವಿತರಿಸುವ ಮುಖೇನ ಪೊಲೀಸರು ಮಾನವೀಯತೆ ಮೆರೆದಿದ್ದಾರೆ. ದಾವಣಗೆರೆ ಗ್ರಾಮಾಂತರ ಪೊಲೀಸ್ ಉಪ ವಿಭಾಗದ ಉಪಾಧೀಕ್ಷಕ ನರಸಿಂಹ ತಾಮ್ರಧ್ವಜ ನೇತೃತ್ವದಲ್ಲಿ ಹರಿಹರ ಗ್ರಾಮಾಂತರ ಪಿಎಸ್ಐ ರವಿಕುಮಾರ್ ಹಾಗೂ ಸಿಬ್ಬಂದಿಗಳು ಸೋಮ ವಾರ ರಾತ್ರಿ ಗಸ್ತು ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಹರಿಹರದ ರಸ್ತೆ ಬದಿಯಲ್ಲಿ ಹಾಸಿಗೆ, ಹೊದಿಕೆ ಇಲ್ಲದೆ ಮಲಗುವ ನಿರಾಶ್ರಿತರಿಗೆ ಹಾಸಿಗೆ, ಹೊದಿಕೆಗಳನ್ನು ವಿತರಿಸಿದ್ದು, ಆ ಮುಖೇನ ಪೊಲೀಸರ ಜನ ರಕ್ಷಣೆ ಮಾಡುವ ಜೊತೆಗೆ ಸಮಾಜಮುಖಿ ಜನಸೇವೆಗೂ ಸಿದ್ಧ ಎಂಬುದಕ್ಕೆ ಸಾಕ್ಷಿಯಾಗಿದ್ದಾರೆ.

## ಪಿಎಫ್ಐ ನಿಷೇಧಕ್ಕೆ ಒತ್ತಾಯ



ರಾಣೇಬೆನ್ನೂರು

ರಾಣೇಬೆನ್ನೂರು, ಡಿ.16- ಆರ್‌ಎಸ್‌ಎಸ್ ಮೇಲೆ ಇಲ್ಲದ ಆರೋಪ ಮಾಡಿ ನಗರದಲ್ಲಿ ಭಿತ್ತಿಪತ್ರಗಳನ್ನು ಅಂಟಿಸಿದ್ದ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಯನ್ನು ನಿಷೇಧಿಸುವಂತೆ ಒತ್ತಾಯಿಸಿ ತಹಶೀಲ್ದಾರರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ವಿಶ್ವ ಹಿಂದೂ ಪರಿಷತ್‌ನ ಈಶ್ವರ ಹಾವನೂರ, ಸು. ಕೃಷ್ಣಮೂರ್ತಿ, ಬಿಜೆಪಿ ಮುಖಂಡರಾದ ಪ್ರಕಾಶ ಬುರಡಿಕಟ್ಟಿ, ದೀಪಕ್ ಹರಪನಹಳ್ಳಿ, ಚೋಳಪ್ಪ ಕಸವಾಳ, ಬಸವರಾಜ ಕೇಲಗಾರ, ಸಿ.ಎಸ್. ಕುಲಕರ್ಣಿ ಇನ್ನಿತರರಿದ್ದರು.

## ವಿಕಲಚೇತನರ ಸೌಲಭ್ಯಗಳ ಜಾಗೃತಿ



ದಾವಣಗೆರೆ, ಡಿ.16- ನಗರದ ಮಹಾರಾಜಪೇಟೆಯ ಶ್ರೀ ವಿಠ್ಠಲ ಮಂದಿರದಲ್ಲಿ ವಿಕಲಚೇತನರುಗಳ ಗುರುತಿನ ಚೀಟಿ ಮತ್ತು ವಿಕಲಚೇತನರಿಗೆ ಇರುವ ಸರ್ಕಾರಿ ಸೌಲಭ್ಯಗಳ ಕುರಿತು ಮಾಹಿತಿ ನೀಡುವ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಸಂಕಲ್ಪ ಸಂಸ್ಥೆ ಕಾರ್ಯದರ್ಶಿ ಜೆ. ಸುರೇಶ್ ಮಾಹಿತಿ ನೀಡಿದರು. ವಿಠ್ಠಲ ಮಂದಿರದ ಮ್ಯಾನೇಜರ್ ಪ್ರಭಾಕರ್ ಮಾತನಾಡಿದರು. ಶಶಾಂಕ್ ವಂದಿಸಿದರು. ಸುರೇಂದ್ರ ಇನ್ನಿತರರು ಭಾಗವಹಿಸಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಶ್ರೀರಾಮ ಬಡಾವಣೆ, ಡಿ.ಸಿ.ಎಂ. ಟೌನ್‌ಶಿಪ್, ಶಕ್ತಿ ನಗರ, ಅಂಬಿಕಾ ನಗರ, ಕೊಟ್ಟೂರೇಶ್ವರ ಬಡಾವಣೆ, ಜಯನಗರ, ಶೇಖರಪ್ಪ ಗೋಡೌನ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ತಂಬಾಕು ಸೇವನೆ ದುಷ್ಪರಿಣಾಮದ ಅರಿವು ಯುವ ಜನತೆಗೆ ಅವಶ್ಯ

ದಾವಣಗೆರೆ, ಡಿ.16- ಕೋಟ್ಪಾ ಕಾಯ್ದೆ ಉಲ್ಲಂಘನೆ ವಿರುದ್ಧ ಪ್ರಕರಣ ದಾಖಲಿಸುವುದಷ್ಟೇ ಅಲ್ಲದೇ ತಂಬಾಕು ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆಯೂ ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸಿ, ದೂರ ಉಳಿಯುವಂತೆ ಮನವೊಲಿಸಬೇಕೆಂದು ನಗರ ಉಪವಿಭಾಗದ ಪೊಲೀಸ್ ಉಪಾಧೀಕ್ಷಕ ನಾಗೇಶ್ ಐತಾಳ್ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಕರೆ ನೀಡಿದರು.



ನಗರದ ಚೇತನಾ ಹೋಟೆಲ್‌ನಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಚೇರಿ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಕೋಟ್ಪಾ ಕಾನೂನು ಅನುಷ್ಠಾನ ಅಧಿಕಾರಿಗಳಿಗೆ ಕೋಟ್ಪಾ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನ, ಸಾಮರ್ಥ್ಯಾಭಿವೃದ್ಧಿ ಹಾಗೂ ಮೇಲ್ವಿಚಾರಣೆ ಕುರಿತ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತಂಬಾಕು ಸೇವನೆಯ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕ ಸಭೆ, ಸಮಾರಂಭ ಮುಖೇನ ಜನಜಾಗೃತಿ ಹೆಚ್ಚಿಸಬೇಕು. ಇಲ್ಲಿ ತರಬೇತಿ ಹೊಂದಿದ ಪೊಲೀಸರು ಸೇರಿದಂತೆ, ವಿವಿಧ ಇಲಾಖೆಯ ಕಾಯ್ದೆ ಅನುಷ್ಠಾನ ಅಧಿಕಾರಿಗಳು ಯುವ ಜನತೆ ಮತ್ತು ಸಮುದಾಯಗಳಲ್ಲಿ ಹೆಚ್ಚಿನ ಅರಿವು ಮೂಡಿಸಬೇಕೆಂದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಹಾಗೂ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಕಾರ್ಯಕ್ರಮಾಧಿಕಾರಿ ಡಾ. ಜಿ.ಡಿ. ರಾಘವನ್ ಪ್ರಾಸ್ತಾವಿಕವಾಗಿ ಮಾತನಾಡಿ, ಕೋಟ್ಪಾ ಕಾಯ್ದೆ ಅನುಷ್ಠಾನ ಮಾಡಲು ಜಿಲ್ಲೆಯಲ್ಲಿ 6 ರಿಂದ 7 ಅಧಿಕಾರಿಗಳನ್ನೊಳಗೊಂಡ ಅನುಷ್ಠಾನಾಧಿಕಾರಿಗಳ ತಂಡ ರಚಿಸಿಕೊಂಡು ಪ್ರತಿ ತಿಂಗಳು ಸಾರ್ವಜನಿಕ ಪ್ರದೇಶಗಳಲ್ಲಿ ತಂಬಾಕು ದಾಳಿ ಜೊತೆಗೆ ತಿಳುವಳಿಕೆ ಹಾಗೂ ಕಾಯ್ದೆ ಉಲ್ಲಂಘನೆಗೆ ದಂಡ ವಿಧಿಸಲಾಗುತ್ತಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಾಗರಾಜ್, ಯುವಜನತೆ ಅದರಲ್ಲೂ 13 ರಿಂದ 18 ವರ್ಷದವರು ತಂಬಾಕು ಸೇವನೆಗೆ ಒಳಗಾಗುತ್ತಿದ್ದು, ಇದರಿಂದ ಹೊರ ತರುವ ಕೆಲಸವಾಗಬೇಕಿದೆ. ಜೀವನ ಶೈಲಿ ಬದಲಾವಣೆ ಸೇರಿದಂತೆ ಸ್ಪರ್ಧಾತ್ಮಕತೆಯನ್ನು ಎದುರಿಸಿ, ವ್ಯಸನಕ್ಕೆ ಬಲಿಯಾಗದಂತೆ ಆರೋಗ್ಯ ಶಿಕ್ಷಣದ ಅವಶ್ಯಕತೆ ಇದೆ ಎಂದು ಹೇಳಿದರು.

**ಡಿವೈಎಸ್‌ಪಿ ನಾಗೇಶ್ ಐತಾಳ್ ಅಭಿಮತ**

ಜಿಲ್ಲಾ ಕ್ಷಯರೋಗ ನಿವಾರಣಾಧಿಕಾರಿ ಹಾಗೂ ಮನೋವೈದ್ಯರಾದ ಡಾ. ಕೆ. ಹೆಚ್. ಗಂಗಾಧರ್ ಅವರು ತಂಬಾಕಿನಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ಉಪನ್ಯಾಸ ನೀಡಿದರು. ರಾಜ್ಯ ತಂಬಾಕು ನಿಯಂತ್ರಣ ಘಟಕದ ವಿಭಾಗೀಯ ಸಂಯೋಜಕ ಮಹಾಂತೇಶ್ ಉಳ್ಳಾಗಡ್ಡಿ ಅವರು ಕೋಟ್ಪಾ ಕಾಯ್ದೆ ಕುರಿತು ಉಪನ್ಯಾಸ ನೀಡಿದರು.

ಡಿಹೆಚ್‌ಒ ಡಾ. ಸುರೇಶ್ ಬಾರ್ಕಿ, ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದ ಜಿಲ್ಲಾ ಸಲಹೆಗಾರ ಸತೀಶ್ ಕಲಹಾಳ್, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ, ಆರೋಗ್ಯ ಇಲಾಖೆ ಸೇರಿದಂತೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಕೋಟ್ಪಾ ಕಾನೂನು ಅನುಷ್ಠಾನ ಅಧಿಕಾರಿಗಳು ಇದ್ದರು.

ಜಿಲ್ಲಾ ಆರೋಗ್ಯ ಮೇಲ್ವಿಚಾರಕ ಎಂ.ವಿ.ಹೊರಕೇರಿ ಸ್ವಾಗತಿಸಿದರು. ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದ ಸಮಾಜ ಕಾರ್ಯಕರ್ತ ಕೆ.ಪಿ. ದೇವರಾಜ್ ನಿರೂಪಿಸಿ, ವಂದಿಸಿದರು.

> ತಂಬಾಕು ಸೇವನೆಗೂ ಅಸಾಂಕ್ರಾಮಿಕ ರೋಗಗಳಿಗೂ ನಿಕಟ ಸಂಬಂಧವಿದ್ದು, ತಂಬಾಕು ಸೇವನೆ ಮಾಡುವವರಲ್ಲಿ ಅಸಾಂಕ್ರಾಮಿಕ ರೋಗಗಳಾದ ಸಕ್ಕರೆ ಕಾಯಿಲೆ, ಹೃದಯ ಸಂಬಂಧಿ ರೋಗ, ಪಾರ್ಶ್ವವಾಯು, ಹೈಪರ್‌ಟೆನ್‌ಷನ್, ಕ್ಯಾನ್ಸರ್‌ನಂತಹ ಮಾರಣಾಂತಿಕ ಕಾಯಿಲೆಗಳು ಹೆಚ್ಚಾಗಿ ಕಂಡುಬರುತ್ತಿವೆ. 30 ವರ್ಷ ಮೇಲ್ಪಟ್ಟವರಲ್ಲಿ ಶೇ.47ರಷ್ಟು ಸಕ್ಕರೆ ಮತ್ತು ಇತರೆ ಅಸಾಂಕ್ರಾಮಿಕ ಕಾಯಿಲೆ ಹೆಚ್ಚುತ್ತಿದ್ದು, ಆರೋಗ್ಯ ಇಲಾಖೆ ಸಿಬ್ಬಂದಿ ತಂಡಗಳು 30 ವರ್ಷ ಮೇಲ್ಪಟ್ಟವರಿಗೆ ಸಕ್ಕರೆ ಸೇರಿದಂತೆ, ಇತರೆ ಅಸಾಂಕ್ರಾಮಿಕ ಕಾಯಿಲೆ ತಪಾಸಣೆ ನಡೆಸುತ್ತಿವೆ. ಅಸಾಂಕ್ರಾಮಿಕ ರೋಗಗಳನ್ನು ಗಂಭೀರವಾಗಿ ಪರಿಗಣಿಸಬೇಕಿದೆ.
>
> **- ಡಾ. ಜಿ.ಡಿ. ರಾಘವನ್**

# ವೈದ್ಯರಿಗೆ ಮೊದಲ ಆದ್ಯತೆಯಾಗಿ ಲಸಿಕೆ

**(1ನೇ ಪುಟದಿಂದ)** ಮಂದಿಗೆ ಮಾತ್ರ ಲಸಿಕೆ ನೀಡಲು ಸಾಧ್ಯವಿದೆ. ಅದರಲ್ಲೂ, ಒಬ್ಬರಿಗೆ ಲಸಿಕೆ ನೀಡಿದ ನಂತರ ಆ ವ್ಯಕ್ತಿಯ ಆರೋಗ್ಯ ಸ್ಥಿತಿಯನ್ನು ಘಟಕದಲ್ಲಿನ ವೈದ್ಯರು ಗಮನಿಸಲಿದ್ದಾರೆ.

ಇಡೀ ರಾಷ್ಟ್ರದಲ್ಲಿ ಮೊದಲ ಹಂತದಲ್ಲಿ ಮೂರು ಕೋಟಿ ಲಸಿಕೆ ನೀಡಲು ನಿರ್ಧರಿಸಲಾಗಿತ್ತಾದರೂ, ಮೊದಲು ಆರೋಗ್ಯ ಸಿಬ್ಬಂದಿಗೆ ಪೂರ್ಣವಾಗಿ ನೀಡಿದ ನಂತರ ಕೊರೊನಾ ವಾರಿಯರ್ಸ್‌ಗೆ ನೀಡಲಾಗುತ್ತದೆ.

ಸರ್ಕಾರದ ಉನ್ನತ ಮೂಲಗಳ ಪ್ರಕಾರ ಬರುವ ಹೊಸ ವರ್ಷದ ಮೊದಲ ಮೂರು ತಿಂಗಳಲ್ಲೇ ರಾಜ್ಯದ ಎಲ್ಲಾ ಕೊರೊನಾ ವಾರಿಯರ್ಸ್‌ಗೆ ಲಸಿಕೆ ದೊರೆಯಲಿದೆ. ನಂತರ ಮಾರಣಾಂತಿಕ ಕಾಯಿಲೆಯಿಂದ ಬಳಲುತ್ತಿರುವವರಿಗೆ ಲಸಿಕೆ ನೀಡಲಾಗುವುದು, ಲಸಿಕೆ ಪಡೆಯುವ ಯಾರೇ ಆದರೂ ಕೇಂದ್ರ ಸರ್ಕಾರದ ಜಾಲತಾಣದಲ್ಲಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳಬೇಕು, ಹೀಗೆ ನೋಂದಾಯಿಸಿಕೊಂಡವರು ಎರಡು ಗುರುತಿನ ಚೀಟಿಯನ್ನು ಲಗತ್ತಿಸಬೇಕು.

ಉಚಿತ ಲಸಿಕೆ ನೀಡುವ ಜೊತೆಗೆ ಶೇ. 50ರಷ್ಟು ಲಸಿಕೆಯನ್ನು ಮುಕ್ತ ಮಾರುಕಟ್ಟೆಗೂ ಬಿಡುಗಡೆ ಮಾಡಲು ಕೇಂದ್ರ ಚಿಂತಿಸಿದೆ. ಮುಕ್ತ ಮಾರುಕಟ್ಟೆಗೆ ಬಿಡುಗಡೆ ಮಾಡಿದರೆ ಲಸಿಕೆ ಪಡೆಯಲು ನೂಕುನುಗ್ಗಲು ಆಗಬಹುದಲ್ಲದೆ, ಕೆಲವರು ಲಸಿಕೆ ಖರೀದಿಸಿ ಕಾಳಸಂತೆಯಲ್ಲಿ ಮಾರುವ ಸಾಧ್ಯತೆಯೂ ಇದೆ.

ಇದನ್ನು ತಪ್ಪಿಸುವ ಉದ್ದೇಶದಿಂದ ಆಧಾರ್ ಮತ್ತು ಇನ್ನೊಂದು ಗುರುತಿನ ಚೀಟಿಯನ್ನು ಕಡ್ಡಾಯಗೊಳಿಸಲಾಗಿದೆ. ಇದನ್ನು ಪಾಲಿಸುವಂತೆ ರಾಜ್ಯಗಳಿಗೆ ಸೂಚಿಸಿ ಕೇಂದ್ರ ಸುತ್ತೋಲೆ ಹೊರಡಿಸಿದೆ. ಲಸಿಕೆ ನೀಡಲಿರುವ ವೈದ್ಯಾಧಿಕಾರಿಗಳು, ಲಸಿಕಾಧಿಕಾರಿಗಳು ಹಾಗೂ ಲಸಿಕೆ ನಿರ್ವಹಣೆ ಮಾಡುವ ಶೈತ್ಯಾಗಾರ ಮೇಲ್ವಿಚಾರಕರು ಮತ್ತು ಆಶಾ ಕಾರ್ಯಕರ್ತೆಯರಿಗೆ ತರಬೇತಿ ಕೊಡಲಿದ್ದು, ಇದಕ್ಕಾಗಿ ಸಿದ್ಧರಾಗಿ ಎಂದು ತಿಳಿಸಲಾಗಿದೆ.

## ಹರಾಜಿಗೆ ಕೇಂದ್ರ ಸಂಪುಟ ಅಸ್ತು

**(1ನೇ ಪುಟದಿಂದ)** ಎಂದು ಸಚಿವರು ತಿಳಿಸಿದ್ದಾರೆ. ಬಿಡ್ ಬೆಲೆಯಷ್ಟೇ ಅಲ್ಲದೇ, ಟೆಲಿಕಾಂ ಕಂಪನಿಗಳು ಪ್ರತಿ ವರ್ಷ ಶೇ.3ರ ಆದಾಯವನ್ನು ಸರ್ಕಾರಕ್ಕೆ ಪಾವತಿಸಬೇಕಿದೆ. ಬಿಡ್‌ದಾರರು ಇಡೀ ಮೊತ್ತವನ್ನು ಒಮ್ಮೆಲೇ ಪಾವತಿಸಬಹುದು. ಇಲ್ಲವೇ ಶೇ.50ರವರೆಗೆ ಹಣವನ್ನು ಪಾವತಿಸಿ ಉಳಿದದ್ದನ್ನು ಕಂತುಗಳಲ್ಲಿ ಪಾವತಿಸಲು ಅವಕಾಶ ನೀಡಲಾಗುವುದು.

## ನಗರದಲ್ಲಿ ಇಂದು - ನಾಳೆ ಚೌಡಾಂಬಿಕಾ ದೇವಿ ಕಾರ್ತಿಕೋತ್ಸವ

ಚೌಡಾಂಬಿಕಾ ದೇವಸ್ಥಾನದ ರಸ್ತೆಯಲ್ಲಿರುವ ಶಾಮನೂರು ಶ್ರೀನಿವಾಸ ಶೆಟ್ಟರ ಸಹೋದರ ಶಾಮನೂರು ಲಕ್ಷ್ಮೀನಾರಾಯಣ ಶೆಟ್ಟರ ಮನೆ ಆವರಣದಲ್ಲಿರುವ ಶ್ರೀ ಚೌಡಾಂಬಿಕಾ ದೇವಿಯ 63ನೇ ವರ್ಷದ ಕಡೆಯ ಕಾರ್ತಿಕ ಮಹೋತ್ಸವ ಇಂದು ಮತ್ತು ನಾಳೆ ನಡೆಯಲಿದೆ.

ಇಂದು ಪ್ರಾತಃಕಾಲ ಮಂಗಳ ಸ್ನಾನ, ಶ್ರೀ ಮಹಾಗಣಪತಿ ಪೂಜೆ, ಶ್ರೀ ದೇವಿಗೆ ಪಂಚಾಮೃತ ಅಭಿಷೇಕ, ಶ್ರೀಸೂಕ್ತ, ಮಹಾಭಿಷೇಕ, ಸಹಸ್ರನಾಮ, ಕುಂಕುಮಾರ್ಚನೆ, ಷೋಡಷೋಪಚಾರ ಪೂಜೆ, ಮಹಾಮಂಗಳಾರತಿ ನಡೆಯುವುದು. ಸಂಜೆ ಶ್ರೀದೇವಿಯವರಿಗೆ ಅಷ್ಟಾವಧಾನ ಸೇವೆ, ಮಂತ್ರ ಪುಷ್ಪ ಮಹಾಮಂಗಳಾರತಿ ನಡೆಯುವುದು.

ನಾಳೆ ಶುಕ್ರವಾರ ಪ್ರಾತಃಕಾಲ ಶ್ರೀದೇವಿಗೆ ಪಂಚಾಮೃತ ಅಭಿಷೇಕ, ಶ್ರೀಸೂಕ್ತ, ದುರ್ಗಾಸೂಕ್ತ, ಮಹಾಭಿಷೇಕ, ಸಹಸ್ರನಾಮ ಕುಂಕುಮಾರ್ಚನೆ ಅಲಂಕಾರ ಷೋಡಷೋಪಚಾರ, ಮಹಾಮಂಗಳಾರತಿ, ಸಂಜೆ 7 ಗಂಟೆಗೆ ದೀಪಾರಾಧನೆ, ಕಾರ್ತಿಕೋತ್ಸವ ಮಹಾಮಂಗಳಾರತಿ ನಡೆಯಲಿದೆ. ನಾಡಿದ್ದು ಶನಿವಾರ ಪ್ರಾತಃಕಾಲ ಅಭಿಷೇಕ, ಶ್ರೀಸೂಕ್ತ, ಮಹಾ ಭಿಷೇಕ, ಸಹಸ್ರನಾಮ ಕುಂಕುಮಾರ್ಚನೆ, ಅಲಂಕಾರ, ಷೋಡಷೋಪಚಾರ ಪೂಜೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ ನಡೆಯಲಿದೆ.

## ನಗರದಲ್ಲಿಂದು ದೇಹದಾರ್ಢ್ಯತೆ ಪರೀಕ್ಷೆ

ಜಿಲ್ಲೆಯಲ್ಲಿ ಖಾಲಿ ಇರುವ ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಈಗಾಗಲೇ ಲಿಖಿತ ಪರೀಕ್ಷೆಯನ್ನು ನಡೆಸಲಾಗಿದ್ದು, ಇಂದು ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆ ನಡೆಸಲಾಗುವುದು.

ಖಾಲಿ ಇರುವ ಹುದ್ದೆಗಳಿಗೆ 1 : 5 ಅನುಪಾತದಲ್ಲಿ ರೋಸ್ಟರ್ ಹಾಗೂ ಮೆರಿಟ್ ಆಧಾರದ ಮೇಲೆ ಅರ್ಹತೆ ಪಡೆದಿರುವ ಅಭ್ಯರ್ಥಿಗಳಿಗೆ ಈಗಾಗಲೇ ಇಲಾಖೆಯಿಂದ ಮಾಹಿತಿಯನ್ನು ನೀಡಿ, ಇಲಾಖಾ ವೆಬ್‌ಸೈಟ್‌ನಲ್ಲಿ ಕರಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ತಿಳಿಸಲಾಗಿರುತ್ತದೆ. ಅದರನ್ವಯ ಸಂಬಂಧಿಸಿದ ಅಭ್ಯರ್ಥಿಗಳು ಇಂದು ಬೆಳಿಗ್ಗೆ 7 ಗಂಟೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಸಲಾಗುವ ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆಗಳಿಗೆ ಹಾಜರಾಗಬೇಕೆಂದು ಪೊಲೀಸ್ ಅಧೀಕ್ಷಕ ಹನುಮಂತರಾಯ ತಿಳಿಸಿದ್ದಾರೆ.

# ಕರೋಡ್ ಪತಿಯಲ್ಲಿ 50 ಲಕ್ಷ ರೂ. ಗೆದ್ದ ಅನಮಯ

**(4ನೇ ಪುಟದಿಂದ)** ನವೆಂಬರ್ 27 ರಂದು ತಿಳಿಯಿತು. ಆಗಿನಿಂದಲೇ ತಯಾರಿ ಆರಂಭವಾಯಿತು. ತಂದೆ ಕ್ವಿಜ್ ಪುಸ್ತಗಳನ್ನು ಕೈಗಿತ್ತರು. ಸುಮಾರು ನಾಲ್ಕು ಸಾವಿರ ಪ್ರಶ್ನೋತ್ತರಗಳನ್ನು ಮನನ ಮಾಡಿಕೊಂಡಿದ್ದೆ. ತಾಯಿ ರಾಜ್ಯದ ಇತಿಹಾಸದ ಬಗ್ಗೆ ಹೇಳಿಕೊಟ್ಟರೆ, ಅಕ್ಕ ಗಣಿತ, ವಿಜ್ಞಾನಗಳ ಬಗ್ಗೆ ತಿಳಿಸಿಕೊಡುತ್ತಿದ್ದರು ಎನ್ನುತ್ತಾರೆ ಅನಮಯ.

ಅಕ್ಟೋಬರ್ 5ನೇ ತಾರೀಖಿನಿಂದ ಪ್ರತಿ ದಿನ 2 ಪ್ರಶ್ನೆ ಕೇಳಲಾಗುತ್ತಿತ್ತು. ಅದರಲ್ಲಿ ಆಯ್ಕೆಯಾಗಿದ್ದೆ. ನಂತರ ನಡೆದ ಮತ್ತೊಂದು ಕ್ವಿಜ್‌ನಲ್ಲಿ 8 ಜನರಲ್ಲಿ ಒಬ್ಬನಾದೆ. ಮುಂದಿನ ಹಾದಿ ಅಮಿತಾಬ್ ಅವರ ಮುಂದೆ ಕುಳಿತುಕೊಳ್ಳುವುದಾಗಿತ್ತು. ಆರಂಭದಲ್ಲಿ ಅವರೆದುರು ಮಾತನಾಡುವಾಗ ಹೃದಯ ಬಡಿತ ಹೆಚ್ಚಾಗಿತ್ತು ಎಂದರು ಅನಮಯ.

ಗೇಮ್ ಶೋ ನಲ್ಲಿ ಗೆದ್ದ ಹಣ ಏನು ಮಾಡುತ್ತೀಯ ಎಂಬ ಅಮಿತಾಬ್ ಪ್ರಶ್ನೆಗೆ, ಸ್ವಂತ ಕಾರ್ ಕಂಪನಿ ಆರಂಭಿಸುವ ಆಲೋಚನೆಯಿದೆ ಎಂಬ ಉತ್ತರಕ್ಕೆ ಸ್ವತಃ ಅಮಿತಾಬ್ ಆಶ್ಚರ್ಯ ವ್ಯಕ್ತಪಡಿಸಿದ್ದರು. ನನ್ನ ತಂದೆಗೂ ಕಾರ್ ಎಂದರೆ ಇಷ್ಟ. ನನಗೂ ಸಹ ಎಂದು ಹೇಳಿದ್ದ ಈ ಬಾಲಕ.

ಅಂದಹಾಗೆ ಶಾಲೆಯ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲೂ ಮುಂದಿರುವ ಈ ಬಾಲಕ. ಶಾಲೆಯ ಪ್ರಾಂಶುಪಾಲರು, ಶಿಕ್ಷಕಿಯರಿಗೆ ಅಚ್ಚುಮೆಚ್ಚಿನ ವಿದ್ಯಾರ್ಥಿ. ಗುರು-ಹಿರಿಯರಿಗೆ ಗೌರವ ಕೊಡುವ ರೀತಿ, ಶಾಲೆಗಳಲ್ಲಿ ನಡೆಯುವ ಕ್ವಿಜ್‌ಗಳಲ್ಲಿ ಭಾಗವಹಿಸುವ ಆಸಕ್ತಿಯನ್ನು ಪ್ರಶಂಸಿಸುತ್ತಾರೆ ಶಾಲೆಯ ಪ್ರಾಂಶುಪಾಲರು.

ಅನಮಯ, ನಗರದ ಸರ್ಕಾರಿ ಐಟಿಐ ಕಾಲೇಜಿನ ಉಪನ್ಯಾಸಕ ನಾಗರಾಜ್ ಅವರ ಸಹೋದರಿಯ ಮೊಮ್ಮಗ.

## ನಿಟ್ಟುಸಿರು

ಯಾರದ್ದೋ ಬದುಕಿನ ಮೇಲೆ
ಇನ್ನಾರದ್ದೋ ಕ್ರೂರ ದೌರ್ಜನ್ಯ
ಮಾನವ ಜನ್ಮಕ್ಕಾದರೂ
ಬೇಡವೇ ಒಂದಿಷ್ಟು ಸೌಜನ್ಯ

ಚುಚ್ಚಿ ನೋಯಿಸುವುದೇ
ಕೆಲ ಅವಿವೇಕಿಗಳ ಪ್ರವೃತ್ತಿ
ಅವರವರ ಬದುಕು ಬದುಕಲಿ
ಎನ್ನದ ದುಷ್ಟ ಮನಸಿನ ವಿಕೃತಿ

ನಮ್ಮದು ಸ್ವತಂತ್ರ ಭಾರತ
ಬೀಗುತಿಹೆವೆಲ್ಲ ಅನವರತ
ಎಲ್ಲಿದೆ, ಯಾರಿಗಿದೆ ಸ್ವಾತಂತ್ರ್ಯ
ಇಲ್ಲಿ ರಣಹದ್ದುಗಳದ್ದೆ ಕುತಂತ್ರ

ಅವರ ದುರಾಸೆಯ ಬೇಳೆ ಬೇಯಿಸಲು
ಹಚ್ಚಿಹರಲ್ಲ ಪರರ ಬದುಕಿಗೆ ಬೆಂಕಿ
ತಾಕದಿದ್ದೀತೇ ಅವರ ಕಂಬನಿಯ ನಿಟ್ಟುಸಿರು
ಮರೆತಂತಿದೆ ಅವರು ಕೂಡ ಅನಿಶ್ಚಿತರು

ಯಾವುದು ನಮ್ಮದಲ್ಲ ಈ ಕ್ಷಣ ಹೊರತು
ಬದುಕಬೇಕಲ್ಲಿ ಎಲ್ಲವನು ಮರೆತು
ಕಾಡುವ ನೆನಪಿಗು ಮೌನವನು ಲೇಪಿಸಿ
ನಡೆಯಲೇಬೇಕು ಬರುವುದೆಲ್ಲವ ಸಹಿಸಿ

**- ಸುನಿತಾ ಪ್ರಕಾಶ್** ದಾವಣಗೆರೆ.

## ನೀಲಾನಹಳ್ಳಿಯಲ್ಲಿ ಕಾರ್ತಿಕ

ದಾವಣಗೆರೆ, ಡಿ.16- ನೀಲಾನಹಳ್ಳಿಯ ಶ್ರೀ ಆಂಜನೇಯ ಸ್ವಾಮಿ ಕಾರ್ತಿಕವು ದಿನಾಂಕ 19 ರ ಶನಿವಾರ ರಾತ್ರಿ 8.30ಕ್ಕೆ ಜರುಗಲಿದೆ.

## ಪ್ರೋತ್ಸಾಹಿಸುವ ಎಸ್ಕೆಪಿ ಬ್ಯಾಂಕ್

**(4ನೇ ಪುಟದಿಂದ)** ವರ್ಗದವರ ಪರಿಶ್ರಮ, ಆಡಳಿತ ಮಂಡಳಿಯ ಎಲ್ಲಾ ಸದಸ್ಯರ ಇಚ್ಛಾಶಕ್ತಿ ಕಾರಣ ಎಂದು ತಿಳಿಸಿ, ಕೃತಜ್ಞತೆ ಸಲ್ಲಿಸಿದರು.

ಬ್ಯಾಂಕಿನ ಆಡಳಿತ ಮಂಡಳಿ ಉಪಾಧ್ಯಕ್ಷರಾದ ಶ್ರೀಮತಿ ಆರ್.ಎನ್. ಸುಜಾತ, ನಿರ್ದೇಶಕರುಗಳಾದ ಕೆ.ಎಸ್. ಸತೀಶ್, ಎನ್. ಕಾಶಿನಾಥ್, ಕೆ.ಎನ್. ಅನಂತರಾಮ ಶೆಟ್ಟಿ, ಎ.ಎಸ್. ಸತ್ಯನಾರಾಯಣಸ್ವಾಮಿ, ಕೆ.ವಿ. ಮಂಜುನಾಥ್, ಜೆ. ರವೀಂದ್ರ ಗುಪ್ತ, ಬಿ.ಎಸ್. ಶಿವಾನಂದ್, ವೈ.ಬಿ. ಸತೀಶ್, ಪಿ.ಎಸ್. ರಾಘವೇಂದ್ರ ಶೆಟ್ಟಿ, ಶ್ರೀಮತಿ ಕೆ.ಎಂ. ಗೀತಾ ರಾಮ್, ಸಿಎ ಜಿ. ಶ್ರೀಧರ್, ಆರ್. ನಾಗರಾಜ ಶೆಟ್ಟಿ ಅವರುಗಳು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕವಿತಾ ಮತ್ತು ಜ್ಯೋತಿ ಅವರುಗಳು ಪ್ರಾರ್ಥನೆ ಸಲ್ಲಿಸಿದರು. ಪ್ರಧಾನ ವ್ಯವಸ್ಥಾಪಕ ಪ್ರಶಾಂತ್ ಪಡಗಲ್ ವಂದಿಸಿದರು.

ಸಹಾಯಕ ಪ್ರಧಾನ ವ್ಯವಸ್ಥಾಪಕ ಭೀಮಾನಂದ ಶೆಟ್ಟಿ, ಶಾಖಾ ವ್ಯವಸ್ಥಾಪಕರುಗಳಾದ ಪಿ.ವಿ. ಪ್ರಸಾದ್, ಎಸ್.ಆರ್. ವಿಜಯಕುಮಾರ್, ಎನ್. ಪ್ರಸಾದ್ ಅವರುಗಳು ಕಾರ್ಯಕ್ರಮದ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸಿದರು.

## ಜಸ್ಟ್ ಇನ್ ಡೀಲ್ ಕಂಪೆನಿ ವಿರುದ್ಧ ದೂರು : ಮೋಸ ಹೋದವರು ಠಾಣೆ ಸಂಪರ್ಕಿಸಿ

ದಾವಣಗೆರೆ, ಡಿ.16- ಜಸ್ಟ್ ಇನ್ ಡೀಲ್ ಕಂಪೆನಿಯವರು ಸಾರ್ವಜನಿಕರಿಂದ ಹಣ ಹೂಡಿಕೆ ಮಾಡಿಸಿಕೊಂಡು, ಹೂಡಿಕೆದಾರರಿಗೆ ವಾಪಸ್ ನೀಡದೇ ಮೋಸ ಮಾಡಿರುತ್ತಾರೆಂದು ಸಿಇಎನ್ ಅಪರಾಧ ಪೊಲೀಸ್ ಠಾಣೆಗೆ ದೂರು ದಾಖಲಾಗಿರುತ್ತದೆ.

ವನಜಾಕ್ಷಿ ಎಂಬುವವರು ಜುಲೈ 18 ರಂದು ಜಸ್ಟ್ ಇನ್ ಡೀಲ್ ಕಂಪೆನಿಯ ಮಾಲೀಕರು ಮತ್ತು ಇತರೆಯವರ ವಿರುದ್ದ ದೂರು ದಾಖಲಿಸಿರುತ್ತಾರೆ. ಈ ಕಂಪನಿಯಲ್ಲಿ ಹೂಡಿಕೆ ಮಾಡಿ ಮೋಸ ಹೋಗಿರುವವರು ಯಾರಾದರೂ ಇದ್ದರೆ ಅಂತಹ ಹೂಡಿಕೆದಾರರು ದಾಖಲಾತಿಗಳೊಂದಿಗೆ ನಗರದ ಸಿಇಎನ್ ಕ್ರೈಂ ಪೊಲೀಸ್ ಠಾಣೆಯಲ್ಲಿ ತನಿಖಾಧಿಕಾರಿಯವರನ್ನು ಸಂಪರ್ಕಿಸಿ, ದೂರು ಸಲ್ಲಿಸಬಹುದೆಂದು ಸಿಇಎನ್ ಅಪರಾಧ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರು ತಿಳಿಸಿದ್ದಾರೆ.

## ಸುರಾನಾ ಕಾರ್ಪೊರೇಷನ್, ನಿರ್ದೇಶಕರ ವಿರುದ್ಧ 2,930 ಕೋಟಿ ರೂ. ವಂಚನೆ ಪ್ರಕರಣ

ನವದೆಹಲಿ, ಡಿ. 16 – ಎಸ್.ಬಿ.ಐ. ನೇತೃತ್ವದ ಆರು ಬ್ಯಾಂಕುಗಳ ಕೂಟಕ್ಕೆ 2,930 ಕೋಟಿ ರೂ.ಗಳ ವಂಚನೆ ಮಾಡಿದ ಆರೋಪದ ಮೇಲೆ ಚೆನ್ನೈನ ಸುರಾನಾ ಕಾರ್ಪೊರೇಷನ್ ಹಾಗೂ ಅದರ ನಿರ್ದೇಶಕರ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿದೆ. ಸುರಾನಾ ಕಾರ್ಪೊರೇಷನ್ ವ್ಯವಸ್ಥಾಪಕ ನಿರ್ದೇಶಕ ವಿಜಯರಾಜ್ ಸುರಾನಾ ಹಾಗೂ ಇತರರು ವಂಚನೆ ನಡೆಸಿ ಬ್ಯಾಂಕುಗಳಿಗೆ ನಷ್ಟ ತಂದಿದ್ದಾರೆ ಎಂದು ಆರೋಪಿಸಲಾಗಿದೆ.

2012ರಲ್ಲಿ ತನ್ನಿಂದ ಸಿಬಿಐ ವಶಪಡಿಸಿಕೊಂಡಿದ್ದ ಬಂಗಾರದ ಪೈಕಿ ಸುಮಾರು 100 ಕೆಜಿ ಕಾಣೆಯಾಗಿದೆ ಎಂದು ಸುರಾನಾ ಸಮೂಹ ಇತ್ತೀಚೆಗೆ ಆರೋಪಿಸಿತ್ತು.

ಸುರಾನಾ ಕಾರ್ಪೊರೇಷನ್ ಮೇಲೆ 2012ರಲ್ಲಿ ಸಿಬಿಐ ದಾಳಿ ನಡೆಸಿದಾಗ 400 ಕೆಜಿಯಷ್ಟು ಬಂಗಾರ ವಶಪಡಿಸಿಕೊಳ್ಳಲಾಗಿತ್ತು. ಈ ಬಂಗಾರವನ್ನು ಕಳೆದ ಫೆಬ್ರವರಿ 27 ಮತ್ತು 29ರ ನಡುವೆ ಪರಿಶೀಲಿಸಿದಾಗ 103 ಕೆಜಿ ಬಂಗಾರ ಕಡಿಮೆ ಇದ್ದದ್ದು ಕಂಡು ಬಂದಿತ್ತು.

## ವಿಶೇಷ ಪ್ರೋತ್ಸಾಹ ಧನ ಅರ್ಜಿ ಅವಧಿ ವಿಸ್ತರಣೆ

ದಾವಣಗೆರೆ, ಡಿ.16- ಆರ್ಥಿಕವಾಗಿ ಹಿಂದುಳಿದ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮುಂದುವರೆಸುವ ನಿಟ್ಟಿನಲ್ಲಿ ಬಿಇಡಿ, ಡಿಇಡಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲು ಅರ್ಜಿ ಆಹ್ವಾನಿಸಲಾಗಿದ್ದು, ದಿನಾಂಕ 28 ರವರೆಗೆ ಅರ್ಜಿ ಅವಧಿ ವಿಸ್ತರಿಸಲಾಗಿದೆ.

ಜಿಲ್ಲೆಯ ಆಯಾ ತಾಲ್ಲೂಕು ಅಲ್ಪಸಂಖ್ಯಾತರ ತಾಲ್ಲೂಕು ಮಾಹಿತಿ ಕೇಂದ್ರಗಳಲ್ಲಿ ಆಫ್‌ಲೈನ್ ಅರ್ಜಿಯನ್ನು ಪಡೆದು ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, 44 ಎ ಬ್ಲಾಕ್ 2ನೇ ಮಹಡಿ, ಜಿಲ್ಲಾಡಳಿತ ಭವನ, ಕರೂರು ಕ್ರಾಸ್, ಹರಿಹರ ರಸ್ತೆ, ದಾವಣಗೆರೆ ಕಚೇರಿಗೆ ಸಲ್ಲಿಸುವುದು.

ಇಲಾಖೆ ವೆಬ್‌ಸೈಟ್‌ನಲ್ಲಿ ಮಾಹಿತಿ ಪಡೆಯುವುದು. ಕಚೇರಿ ಫೋನ್: 08192-250022 ಸಂಪರ್ಕಿಸಲು ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

## ಎಂಬಿಬಿಎಸ್ : ಬಡ ವಿದ್ಯಾರ್ಥಿಗೆ ಧನ ಸಹಾಯಕ್ಕಾಗಿ ಮನವಿ

ದಾವಣಗೆರೆ, ಡಿ.16 - ಕೂಲಿ ಕೆಲಸ ಮಾಡಿ ಜೀವನ ನಿರ್ವಹಿಸುತ್ತಿರುವ ನಗರದ ನಿಂಗಪ್ಪ ಮತ್ತು ಶಂಕರಮ್ಮ ದಂಪತಿ ಪುತ್ರ ಎನ್.ಎಸ್. ವಸಂತ, 2020ರ ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಪ್ರಸ್ತುತ ಚಿತ್ರದುರ್ಗ ಬಸವೇಶ್ವರ ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದಾನೆ. ಪ್ರವೇಶ ಶುಲ್ಕಕ್ಕೆ ಹಣದ ಕೊರತೆಯಿಂದ ತೊಂದರೆಯಾಗಿದ್ದು, ದಾನಿಗಳು ತನಗೆ ಧನ ಸಹಾಯ ಮಾಡುವಂತೆ ವಸಂತ ಕೇಳಿಕೊಂಡಿದ್ದಾನೆ. ವಿದ್ಯಾರ್ಥಿಯ ಬ್ಯಾಂಕ್ ಖಾತೆ : ಕರ್ನಾಟಕ ಬ್ಯಾಂಕ್ (ಖಾತೆ ಸಂಖ್ಯೆ 1902500102492401) ಐಎಫ್‌ಎಸ್‌ಸಿ ಕೋಡ್ : ಕೆಎಆರ್‌ಬಿ0000190, ದೂರವಾಣಿ (7019358082).

## ಸದ್ಯ ಮುಗಿಯಿತು ಬಸ್ಸಿನ ಮುಷ್ಕರ

ಮುಷ್ಕರ ಮುಷ್ಕರ ಎಷ್ಟು ಕಷ್ಟಕರ
ಮುಷ್ಕರ ಜನರಿಗೆ ನೋವಿನ ಆಗರ

ಬಸ್ಸೇ ಸಾಮಾನ್ಯ ಜನರಿಗೆ ಆಧಾರ
ಬಸ್ಸಿಗಾಗಿ ಕಾಯುತಿಹರಪಾರ
ಬಸ್ಸಿಲ್ಲದೆ ಒಂದೇ ಸ್ಥಳದಲ್ಲಿ ನಿಂತವರ
ನೆನಸಿಕೊಂಡರೆ ಬರದೆ ಕನಿಕರ

ನೌಕರಿಗೆ ಹೋಗಲೇ ಬೇಕು ಈ ಬಡಜನರು
ಬೇಕು ಅವರಿಗೆ ಬಸ್ಸಿನ ವ್ಯವಸ್ಥೆ
ಹಾಕಲಾರರು ಬೇರೆ ಗಾಡಿಗೆ ಬಂಡವಾಳ
ನೂಕುವರು ಆ ದಿನವ ಕೂಳಿಲ್ಲದೆ

ಸಮಾಜದ ಜೀವರಿಗೆ ತೊಂದರೆ ಕೊಡದಲೆ
ಸಮಾನ ಮನಸ್ಕರಾಗಿ ಇರಬಾರದೇ
ಸಮಾಜಕಾಗಿ ದುಡಿಯುವ ಜೀವರಿಗೆ
ಸುಮ್ಮನೆ ಸರ್ಕಾರ ಸ್ಪಂದಿಸಬಾರದೆ

ಲಾರಿ, ಬ್ಯಾಂಕು, ಯಾವ ಮುಷ್ಕರವೇ ಆದರೂ
ಪರಮ ಹಾನಿಯು ಜನ ಸಾಮಾನ್ಯನಿಗೆ
ಸರಿಯಾದ ಮಾತುಕತೆ ನಡೆಯಲಿ ಮುಂದೆ
ಇರದಿರಲಿ ಮುಷ್ಕರವು ಇನ್ನು ಮುಂದೆ

ರೋಗದಿಂದ ಬಳಲಿ ಬೆಂದಿರುವ ಜೀವರಿಗೆ
ಈಗ ಈ ಮುಷ್ಕರದ ಬಿಸಿಯು ಬೇಕೆ
ಜಗದ ಈ ರೀತಿ ಬದಲಾಗಲಿ ಎಂದು
ಜಗದೀಶ ಸಿರಿಹರಿಯ ಬೇಡಿಕೊಂಬೆ

**- ಶ್ರೀ ಕೃಷ್ಣಾರ್ಪಣಮಸ್ತು**
**ರೂಪಶ್ರೀ ಶಶಿಕಾಂತ್**

# ಶಾಲಾ ಶಿಕ್ಷಕರ ಸಂಘದ ಚುನಾವಣೆ : ಅಧಿಕ ಮತದಾನ

ದಾವಣಗೆರೆ, ಡಿ.16- ಕರ್ನಾಟಕ ರಾಜ್ಯ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಚುನಾವಣೆಯು ನಗರ ಹಾಗೂ ಜಿಲ್ಲೆಯ ವಿವಿಧ ತಾಲ್ಲೂಕು ಕೇಂದ್ರಗಳಲ್ಲಿ ಮಂಗಳವಾರ ಶಾಂತಿಯುತವಾಗಿ ನಡೆಯಿತು.

ಸಂಘದ 90 ಸ್ಥಾನಗಳಿಗೆ 207 ಅಭ್ಯರ್ಥಿಗಳು ಚುನಾವಣೆಗೆ ಸ್ಪರ್ಧಿಸಿದ್ದರು. ಒಟ್ಟು 4355 ಮತದಾರರಿದ್ದು, ಜಿಲ್ಲಾದ್ಯಂತ ಸರಾಸರಿ ಶೇ.90ಕ್ಕಿಂತಲೂ ಅಧಿಕ ಮತದಾನವಾಗಿದೆ.

ದಾವಣಗೆರೆ ದಕ್ಷಿಣ ವಲಯದ ಶಿಕ್ಷಕ-ಶಿಕ್ಷಕಿಯರು ಇಲ್ಲಿನ ಹೈಸ್ಕೂಲ್ ಮೈದಾನದ ಸರ್ಕಾರಿ ಬಾಲಕರ ಪ್ರೌಢಶಾಲೆಯ ಮತಗಟ್ಟೆಯಲ್ಲಿ ಮತ ಚಲಾಯಿಸಿದರೆ, ಉತ್ತರ ವಲಯದ ಶಿಕ್ಷಕ-ಶಿಕ್ಷಕಿಯರು ನಗರದ ಎಕ್ಸ್ ಮುನ್ಸಿಪಲ್ ಶಾಲೆಯ ಮತಗಟ್ಟೆಗೆ ಬಂದು ಮತವನ್ನು ಚಲಾಯಿಸಿದರು. ಆಯಾ ತಾಲ್ಲೂಕುಗಳ ಮತದಾರರಾದ ಸರ್ಕಾರಿ ಶಾಲೆಗಳ ಶಿಕ್ಷಕ-ಶಿಕ್ಷಕಿಯರು ನಿಗದಿತ ಮತಗಟ್ಟೆಯಲ್ಲಿ ಮತ ಚಲಾಯಿಸಿದರು. ಅತೀ ಹೆಚ್ಚು ಮತದಾನ ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕಿನಲ್ಲಾಗಿದೆ. ದಾವಣಗೆರೆ ಉತ್ತರ ವಲಯದಲ್ಲಿ ಅತೀ ಕಡಿಮೆ ಮತದಾನವಾಗಿದೆ ಎಂದು ಮಾಹಿತಿ ಲಭ್ಯವಾಗಿದೆ.

ಉತ್ತರ ವಲಯದ 14 ಸ್ಥಾನಗಳಿಗೆ 40 ಅಭ್ಯರ್ಥಿಗಳು ಸ್ಪರ್ಧಿಸಿದ್ದು, 686 ಮತದಾರರ ಪೈಕಿ ಶೇ.95ರಷ್ಟು ಮತದಾನವಾಗಿದೆ. ದಕ್ಷಿಣ ವಲಯದ 13 ಸ್ಥಾನಕ್ಕೆ 33 ಜನ ಅಭ್ಯರ್ಥಿಗಳು ಸ್ಪರ್ಧಿಸಿದ್ದು, 644 ಮತದಾರರ ಪೈಕಿ ಶೇ.98ರಷ್ಟು ಹಕ್ಕು ಚಲಾಯಿಸಲಾಗಿದೆ. ಜಗಳೂರು ತಾಲ್ಲೂಕಿನ 13 ಸ್ಥಾನಕ್ಕೆ 26 ಅಭ್ಯರ್ಥಿಗಳು ಸ್ಪರ್ಧಿಸಿದ್ದು, 633 ಮತದಾರರ ಪೈಕಿ ಶೇ.98ರಷ್ಟು ಮತ ಚಲಾವಣೆ ಯಾಗಿದೆ. ಹರಿಹರದ 14 ಸ್ಥಾನಕ್ಕೆ 31 ಜನ ಸ್ಪರ್ಧಿಸಿದ್ದು, 709 ಮತದಾರರ ಪೈಕಿ ಶೇ.92 ಮತದಾನವಾಗಿದೆ.

ಹೊನ್ನಾಳಿಯ 9 ಸ್ಥಾನಗಳಿಗೆ 21 ಅಭ್ಯರ್ಥಿಗಳು ಸ್ಪರ್ಧಿಸಿದ್ದು, 469 ಮತದಾರರ ಪೈಕಿ ಶೇ.98 ಮತದಾನವಾಗಿದೆ. ನ್ಯಾಮತಿಯ 6 ಸ್ಥಾನಗಳಿಗೆ 12 ಅಭ್ಯರ್ಥಿಗಳು ಸ್ಪರ್ಧಿಸಿದ್ದು, 285 ಮತದಾರರ ಪೈಕಿ ಶೇ.98 ಮತ ಚಲಾವಣೆಯಾಗಿವೆ. ಚನ್ನಗಿರಿಯ 21 ಸ್ಥಾನಗಳ ಪೈಕಿ 44 ಅಭ್ಯರ್ಥಿಗಳು ಸ್ಪರ್ಧಿಸಿದ್ದು, 929 ಮತದಾರರಲ್ಲಿ ಶೇ.92 ಮತ ಚಲಾವಣೆಯಾಗಿವೆ.

ಈ ಸಂದರ್ಭದಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದ ಗೌರವಾಧ್ಯಕ್ಷ ಡಾ. ಉಮೇಶ್, ಅಧ್ಯಕ್ಷ ಬಿ. ಪಾಲಾಕ್ಷ, ಕಾರ್ಯದರ್ಶಿ ಮಂಜುನಾಥ, ಖಜಾಂಚಿ ಕಲ್ಲೇಶಪ್ಪ, ರಾಜ್ಯ ಪರಿಷತ್ ಸದಸ್ಯ ಸಿದ್ದಲಿಂಗಸ್ವಾಮಿ, ಬಿ. ಶಿವಣ್ಣ, ಎನ್. ಮಾರುತಿ, ಪುನೀತ್ ಶಂಕರ್, ಮಲ್ಲಿಕಾರ್ಜುನ ಸ್ವಾಮಿ, ಡಿಡಿಪಿಐ ಸಿ.ಆರ್. ಪರಮೇಶ್ವರಪ್ಪ, ಬಿಇಓ ಬಿ.ಸಿ. ಸಿದ್ದಪ್ಪ, ಕೊಟ್ರೇಶ್ ಸೇರಿದಂತೆ ಇತರರು ಹಾಜರಿದ್ದರು.

## ಅಭಿಯಾನದಿಂದ ದೇಣಿಗೆ

**(4ನೇ ಪುಟದಿಂದ)** ಪಾರದರ್ಶಕತೆ ಕಾಯ್ದುಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು. ಟ್ರಸ್ಟ್ 10 ರೂ. ಮುಖಬೆಲೆಯ 4 ಕೋಟಿ ಕೂಪನ್, 100 ರೂ. ಮುಖಬೆಲೆಯ 8 ಕೋಟಿ ಕೂಪನ್ ಹಾಗೂ 1,000 ರೂ. ಮುಖಬೆಲೆಯ 12 ಲಕ್ಷ ಕೂಪನ್‌ಗಳನ್ನು ಮುದ್ರಿಸಿದೆ ಎಂದವರು ತಿಳಿಸಿದ್ದಾರೆ.

ದೇವಾಲಯ ನಿರ್ಮಾಣಕ್ಕೆ ವಿದೇಶದಿಂದ ದೇಣಿಗೆ ಪಡೆಯಲು ಟ್ರಸ್ಟ್ ಅಗತ್ಯ ಅನುಮತಿಗಳನ್ನು ಹೊಂದಿಲ್ಲ. ಹೀಗಾಗಿ ವಿದೇಶಗಳಿಂದ ಹಣ ಸಂಗ್ರಹಿಸುವುದಿಲ್ಲ ಎಂದವರು ತಿಳಿಸಿದ್ದಾರೆ.

ಹಣ ಸಂಗ್ರಹಕ್ಕಾಗಿ ಯಾವುದೇ ನಿರ್ದಿಷ್ಟ ಗುರಿ ಹೊಂದಿಲ್ಲ. ದೇವಾಲಯ ನಿರ್ಮಾಣಕ್ಕೆ ಆಗುವ ವೆಚ್ಚವನ್ನೂ ಅಂದಾಜಿಸಿಲ್ಲ. ಅಭಿಯಾನದ ವೇಳೆ ರಾಮ ಜನ್ಮಭೂಮಿ ಐತಿಹಾಸಿಕ ಮಹತ್ವ ಕುರಿತು ಅರಿವು ಮೂಡಿಸಲಾಗುವುದು ಎಂದು ರಾಯ್ ಹೇಳಿದ್ದಾರೆ.

**ಮಾನ್ಯ ಪ್ರಧಾನ ಸಿವಿಲ್ ಮತ್ತು ಸಿ.ಜೆ.ಎಂ. ನ್ಯಾಯಾಲಯದಲ್ಲಿ, ದಾವಣಗೆರೆ.**

**ಜಿ & ಡಬ್ಲ್ಯೂ ಸಿ ನಂ. 11/2020**

**ಅರ್ಜಿದಾರರು :** ರಹೀಲ್ ಎಂ. ಮತ್ತು ಇತರರು **ವಿರುದ್ದ** **ಎದುರುದಾರರು :** ಯಾರೂ ಇಲ್ಲ

**ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20 ರಡಿಯಲ್ಲಿ ಹೊರಡಿಸುವ ಪತ್ರಿಕಾ ಪ್ರಕಟಣೆ**

ಈ ಕೇಸಿನಲ್ಲಿ 3ನೇ ಅರ್ಜಿದಾರರಾದ **ಶಕೀಲಾ ಬಾನು** ಅವರು ರಹೀಲ್ ಎಂ. ಮತ್ತು ಶಶೀತಾ ಎಂ. ರವರ 1ನೇ ಮತ್ತು 2ನೇ ಅರ್ಜಿದಾರರಾಗಿ ಅಪ್ರಾಪ್ತರಾಗಿರುವ ಕಾರಣದಿಂದಾಗಿ 3ನೇ ಅರ್ಜಿದಾರರು ಈ ಮೇಲಿನ ಪ್ರಕರಣವನ್ನು ನ್ಯಾಯಾಲಯದಲ್ಲಿ ಷೆಡ್ಯೂಲ್ ಆಸ್ತಿ - **ದಾವಣಗೆರೆ ಸಿಟಿ, 3ನೆ ವಾರ್ಡ್, 4ನೇ ಡಿವಿಜನ್, ನರಸರಾಜಪೇಟೆಯಲ್ಲಿ ಬರತಕ್ಕ ಸ್ವತ್ತಿನ ಹಳೆ ಡೋರ್ ನಂ. 251/4 ರಿಂದ 6 ದಾವಣಗೆರೆ ಮಹಾನಗರ ಪಾಲಿಕೆಯ ಚಾಲ್ತಿ ಡೋರ್ ನಂ 289/1,2 ಇದರ ಖಾತೆಯಲ್ಲಿ ಕಂಡಂತೆ ಅಳತೆ- 3.90X 7.60 ಮೀಟರ್ ಮತ್ತು 4.30x3.090 ಮೀಟರ್** ಇದ್ದು ಸ್ಥಳದಲ್ಲಿ ಹಾಗೂ ದಾನಪತ್ರದಲ್ಲಿ ಕಂಡಂತೆ ಅಡಿಗಳಲ್ಲಿ ಅಳತೆ : ಪೂರ್ವ-ಪಶ್ಚಿಮ ಐವತ್ತೈದು ಅಡಿ, ಉತ್ತರ-ದಕ್ಷಿಣ ಹದಿನೈದು ಅಡಿ, ಒಟ್ಟು ಅಳತೆ 750 ಅಡಿ. **ಪೂರ್ವಕ್ಕೆ ಕನ್ಸರ್‌ವೆನ್ಸಿ ರಸ್ತೆ, ಪಶ್ಚಿಮಕ್ಕೆ ಗಂಗಾವತಿ ಕುಬೇರಪ್ಪ ಇವರ ಮನೆ, ಉತ್ತರಕ್ಕೆ -ಬಾಷಾ ಸಾಹೇಬ್ ಇವರ ಮನೆ, ದಕ್ಷಿಣಕ್ಕೆ - ಇಬ್ರಾಹಿಂ ಸಾಹೇಬ್ ಇವರ ಮನೆ.** ಈ ಮೇಲಿನ ಷೆಡ್ಯೂಲ್ ಆಸ್ತಿಯನ್ನು 3ನೇ ಅರ್ಜಿದಾರರು ಮಾರಾಟ ಮಾಡುವ ಸಲುವಾಗಿ ನ್ಯಾಯಾಲಯದಲ್ಲಿ ಅನುಮತಿ ಕೋರಿ ಈ ಮೇಲಿನ ಕೇಸನ್ನು ದಾಖಲಿಸಿರುತ್ತಾರೆ. ಆದ ಕಾರಣ ಈ ಷೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ಯಾರಾದರೂ ತಕರಾರು ಸಲ್ಲಿಸುವ ಉದ್ದೇಶವಿದ್ದರೆ, ನ್ಯಾಯಾಲಯದ ಮುಂದಿನ ದಿನಾಂಕ 02.01.2021 ರಂದು ತಕರಾರು ಅರ್ಜಿ ಸಲ್ಲಿಸಬೇಕಾಗಿ ಈ ಮೂಲಕ ತಿಳಿಯಪಡಿಸಲಾಗಿದೆ.

ದಿನಾಂಕ 15.12.2020ರಂದು ನನ್ನ ಸಹಿ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ ನೀಡಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-
**ಶಿರಸ್ತೇದಾರರು**
**ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ದಾವಣಗೆರೆ.**

ಸ್ಥಳ: ದಾವಣಗೆರೆ
ದಿನಾಂಕ: 14.12.2020
ಸಹಿ/-
ರೇವಣ್ಣ ವಿ., ಅರ್ಜಿದಾರರ ಪರ ವಕೀಲರು

# ಬಡವರನ್ನು ಆರ್ಥಿಕವಾಗಿ ಪ್ರೋತ್ಸಾಹಿಸುವ ಎಸ್ಕೆಪಿ ಬ್ಯಾಂಕ್




ದಾವಣಗೆರೆ,ಡಿ.16- ಆರ್ಥಿಕವಾಗಿ ಹಿಂದುಳಿದ ಸಾಮಾನ್ಯ ಜನರನ್ನು ಪ್ರೋತ್ಸಾಹಿಸುವುದರ ಮೂಲಕ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ನಿಟ್ಟಿನಲ್ಲಿ ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪರೇಟಿವ್ ಬ್ಯಾಂಕ್ ಅರ್ಥಪೂರ್ಣ ಸಾಮಾಜಿಕ ಸೇವೆ ಸಲ್ಲಿಸುತ್ತಿದೆ ಎಂದು ಉದ್ಯಮಿಯೂ ಆಗಿರುವ ಬ್ಯಾಂಕಿನ ಆಡಳಿತ ಮಂಡಳಿ ಅಧ್ಯಕ್ಷ ಆರ್. ಜಿ. ಶ್ರೀನಿವಾಸಮೂರ್ತಿ ತಿಳಿಸಿದ್ದಾರೆ.

ಕೊರೊನಾ ವೈರಸ್ ಹಿನ್ನೆಲೆಯಲ್ಲಿ ಸರ್ಕಾರ ರೂಪಿಸಿರುವ ಮಾರ್ಗಸೂಚಿಯಿಂದಾಗಿ ವೀಡಿಯೋ ಕಾನ್ಫರೆನ್ಸ್ - ವೆಬ್ ಕಾಸ್ಟ್ ಮೂಲಕ ಮೊನ್ನೆ ಏರ್ಪಾಡಾಗಿದ್ದ ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪರೇಟಿವ್ ಬ್ಯಾಂಕ್ ನ ವರ್ಚುಯಲ್ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಆರ್ಥಿಕ ಅಡಚಣೆಗಳನ್ನು ನಿವಾರಿಸುವ ದಿಸೆಯಲ್ಲಿ ಸಣ್ಣ ಮತ್ತು ಅತೀ ಸಣ್ಣ ಸಾಲಗಾರರನ್ನು ಉತ್ತೇಜಿಸುವ ಸದುದ್ದೇಶದಿಂದ ತಮ್ಮ ಬ್ಯಾಂಕ್ ಪ್ರಸ್ತುತ ಜಾರಿಗೆ ತಂದಿದ್ದ 'ಕನ್ನಿಕಾ ಅಕ್ಷಯ ಎಸ್.ಹೆಚ್.ಜಿ. -18' ಯೋಜನೆಯು ನಿರೀಕ್ಷೆಗೂ ಮೀರಿ ಗುರಿ ಸಾಧಿಸಿರುವುದಾಗಿ ಅವರು ಹೇಳಿದರು.

ಈ ಯೋಜನೆಯಡಿಯಲ್ಲಿ 2020 ಸೆಪ್ಟೆಂಬರ್ ಅಂತ್ಯಕ್ಕೆ 4.44 ಕೋಟಿ ರೂ.ಗಳ ಸಾಲವನ್ನು ಸಣ್ಣ ಮತ್ತು ಅತೀ ಸಣ್ಣ ವ್ಯಾಪಾರಸ್ಥರಿಗೆ ನೀಡುವುದರ ಮೂಲಕ ಅವರನ್ನು ಆರ್ಥಿಕವಾಗಿ ಸದೃಢರನ್ನಾಗಿ ಮಾಡುವುದರೊಂದಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ದೇಶದ ಆರ್ಥಿಕ ಚಟುವಟಿಕೆಯಲ್ಲಿ ಕನ್ನಿಕಾಪರಮೇಶ್ವರಿ ಬ್ಯಾಂಕ್ ಭಾಗಿಯಾಗಿದೆ ಎಂದು ಶ್ರೀನಿವಾಸಮೂರ್ತಿ ಹರ್ಷ ವ್ಯಕ್ತಪಡಿಸಿದರು.

**ಆಧಾರ ರಹಿತ ಸಾಲ :** ಚನ್ನಗಿರಿ ಪಟ್ಟಣದ ಹೆಸರಾಂತ ಸಹಕಾರಿ ಸಂಸ್ಥೆ ತೋಟ ಉತ್ಪನ್ನಗಳ ಮಾರಾಟ ಸಂಸ್ಥೆಯೊಂದಿಗೆ ಕನ್ನಿಕಾಪರಮೇಶ್ವರಿ ಬ್ಯಾಂಕ್ ತ್ರಿಪಕ್ಷೀಯ ಒಡಂಬಡಿಕೆ ಮಾಡಿಕೊಂಡು, ಮಾರಾಟ ಸಂಸ್ಥೆಯ ಸದಸ್ಯ ರಿಗೆ ಆಧಾರ ರಹಿತ ಸಾಲವನ್ನು ನೀಡುವುದರ ಮೂಲಕ ತಮ್ಮ ಬ್ಯಾಂಕಿನ ಚನ್ನಗಿರಿ ಶಾಖೆಯನ್ನು ಲಾಭದಾಯಕದಲ್ಲಿ ಮುನ್ನಡೆಸಲು ಉದ್ದೇಶಿಸಲಾಗಿದೆ. ಈ ಸಂಬಂಧ ಪ್ರಥಮ ಹಂತದ ಮಾತುಕತೆ ಪೂರ್ಣಗೊಂಡಿದ್ದು, ಬರುವ ಹೊಸ ವರ್ಷ 2021ರ ಜನವರಿಯಿಂದ ಜಾರಿ ಮಾಡಲಾಗುವುದು ಎಂದು ಅವರು ಪ್ರಕಟಿಸಿದರು.

ಪ್ರಗತಿದಾಯಕದಲ್ಲಿ ಮುನ್ನಡೆದಿರುವ ಬ್ಯಾಂಕಿನ ಅಭಿವೃದ್ಧಿಗೆ ಸಂಬಂಧಿಸಿದಂತೆ ಅಂಕಿ -ಅಂಶಗಳನ್ನು ಸಭೆಗೆ ಒದಗಿಸಿದ ಶ್ರೀನಿವಾಸಮೂರ್ತಿ, ಬ್ಯಾಂಕಿನ ಸರ್ವತೋಮುಖ ಬೆಳವಣಿಗೆಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದವರನ್ನು ಪ್ರಸ್ತಾಪಿಸಿ, ಅವರಿಗೆ ಕೃತಜ್ಞತೆ ಸಲ್ಲಿಸಿದರು.

**ಕೋವಿಡ್ ನಲ್ಲೂ ಪ್ರಗತಿ :** ವಿಶ್ವವನ್ನೇ ತಲ್ಲಣಗೊಳಿಸಿದ ಕೊರೊನಾ ವೈರಸ್ ಸಂದರ್ಭದಲ್ಲೂ ಕನ್ನಿಕಾಪರಮೇಶ್ವರಿ ಬ್ಯಾಂಕ್ ಅಭಿವೃದ್ಧಿ ಪಥದಲ್ಲಿ ಸಾಗಿದ್ದು, ಇದು ಸದಸ್ಯರು ಮತ್ತು ಗ್ರಾಹಕರು ತಮ್ಮ ಬ್ಯಾಂಕ್ ಮೇಲಿಟ್ಟಿರುವ ಪ್ರೀತಿ - ವಿಶ್ವಾಸ - ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ ಎಂದು ಬ್ಯಾಂಕಿನ ಹಿರಿಯ ನಿರ್ದೇಶಕರಲ್ಲೊಬ್ಬರಾದ ಆರ್.ಎಲ್. ಪ್ರಭಾಕರ್ ಮೆಚ್ಚುಗೆ ವ್ಯಕ್ತಪಡಿಸಿದರು.

ಸಭೆಗೆ ಅತಿಥಿ ಗಣ್ಯರನ್ನು ಸ್ವಾಗತಿಸಿ ಮಾತನಾಡಿದ ಅವರು, ತಮ್ಮ ಬ್ಯಾಂಕ್ ಸದೃಢವಾದ ಸಂಸ್ಥೆ ಎಂದು ಹಲವಾರು ಉದಾಹರಣೆಗಳೊಂದಿಗೆ ಪ್ರತಿಪಾದಿಸಿದರು. ಈ ಬ್ಯಾಂಕ್ ಪ್ರಗತಿಯಲ್ಲಿ ಸಾಗಲು ಸದಸ್ಯರು ಮತ್ತು ಠೇವಣಿದಾರರ ಸಹಕಾರ - ಪ್ರೋತ್ಸಾಹ, ಸಿಬ್ಬಂದಿ (3ನೇ ಪುಟಕ್ಕೆ)

### 3.57 ಕೋಟಿ ರೂ. ಲಾಭ

2020 ಮಾರ್ಚ್ ಅಂತ್ಯಕ್ಕೆ ಕನ್ನಿಕಾ ಪರಮೇಶ್ವರಿ ಬ್ಯಾಂಕ್ 3.57 ಕೋಟಿ ರೂ. ಲಾಭ ಗಳಿಸಿದ್ದು, ಆದಾಯ ತೆರಿಗೆ ಮತ್ತು ಇತರೆ ಅವಕಾಶಗಳನ್ನು ಕಲ್ಪಿಸಿದ ನಂತರ 2.22 ಕೋಟಿ ರೂ. ನಿವ್ವಳ ಲಾಭ ಗಳಿಸಿದೆ. ಇದು, ಕಳೆದ ಸಾಲಿಗಿಂತ ಶೇ.7.46ರಷ್ಟು ಹೆಚ್ಚಾಗಿರುತ್ತದೆ.

-ಆರ್.ಜಿ. ಶ್ರೀನಿವಾಸಮೂರ್ತಿ,
ಅಧ್ಯಕ್ಷರು,
ಶ್ರೀ ಕನ್ನಿಕಾಪರಮೇಶ್ವರಿ
ಕೋ-ಆಪರೇಟಿವ್ ಬ್ಯಾಂಕ್




ಬ್ಯಾಡಗಿ ಮೆಣಸಿನಕಾಯಿ ಖಾರದಪುಡಿ ಮತ್ತು ಅರಿಷಿನಪುಡಿ ದೊರೆಯುತ್ತದೆ.
ಜಯಪ್ಪ – 9008536467
ಆನಂದ ಕಾಂಪ್ಲೆಕ್ಸ್, ನಂ.12, ಅಶೋಕ ರಸ್ತೆ, ದಾವಣಗೆರೆ.


# ಕೌನ್ ಬನೇಗಾ ಕರೋಡ್ ಪತಿಯಲ್ಲಿ 50 ಲಕ್ಷ ರೂ.ಗಳನ್ನು ಗೆದ್ದ ಅನಮಯ






ದಾವಣಗೆರೆ, ಡಿ. 16- ಬಾಲಿವುಡ್ ಸೂಪರ್ ಸ್ಟಾರ್ ಅಮಿತಾಬ್ ಬಚ್ಚನ್ ನಿರೂಪಕರಾಗಿ ನಡೆಸಿಕೊಡುವ, ಕಿರುತೆರೆಯ ಅತ್ಯಂತ ಜನಪ್ರಿಯ 'ಕೌನ್ ಬನೇಗಾ ಕರೋಡ್ ಪತಿ' ರಿಯಾಲಿಟಿ ಗೇಮ್ ಶೋ ಅದೆಷ್ಟೋ ಮಂದಿಯನ್ನು ಲಕ್ಷಾಧೀಶರನ್ನಾಗಿ, ಕೆಲವರನ್ನು ಕೋಟ್ಯಾಧಿಪತಿಗಳನ್ನಾಗಿಸಿದೆ.

ಇತ್ತೀಚೆಗೆ ನಡೆದ ಸ್ಟೂಟೆಂಡ್ ಸ್ಪೆಷಲ್ ವೀಕ್ ಕಾರ್ಯಕ್ರಮದಲ್ಲಿ ಉಡುಪಿಯ ಶಾಲೆಯೊಂದರಲ್ಲಿ ಓದುತ್ತಿರುವ ದಾವಣಗೆರೆ ಮೂಲದ ಅನಮಯ ಯೋಗೇಶ್ ದಿವಾಕರ್ ಕೌನ್ ಬನೇಗಾ ಕರೋಡ್ ಪತಿಯಲ್ಲಿ 50 ಲಕ್ಷ ರೂ.ಗಳನ್ನು ಗೆದ್ದಿದ್ದಾರೆ. ಈ ಕುರಿತ ಎಪಿಸೋಡ್ 16ರ ಬುಧವಾರ ಪ್ರದರ್ಶನವಾಗಿದೆ.

ಲರ್ನಿಂಗ್ ಆಪ್ ಮೂಲಕ ಅ.5 ರಿಂದ 25ರವರೆಗೆ ನಡೆದ ಆನ್‌ಲೈನ್ ಕ್ವಿಜ್ ನಲ್ಲಿ ದೇಶಾದ್ಯಂತ ಭಾಗವಹಿಸಿದ್ದ 1.5 ಲಕ್ಷ ವಿದ್ಯಾರ್ಥಿಗಳಲ್ಲಿ ಅನಮಯ ಆಯ್ಕೆಯಾಗಿದ್ದರು.

ಉಡುಪಿಯ ವಿದ್ಯೋದಯ ಪಬ್ಲಿಕ್ ಶಾಲೆಯಲ್ಲಿ 7ನೇ ತರಗತಿ ಓದುತ್ತಿರುವ ಈ ಪ್ರತಿಭೆ, ದಾವಣಗೆರೆಯ ಚೌಕಿಪೇಟೆಯಲ್ಲಿರುವ ಜ್ಯೂವೆಲರಿ ಅಂಗಡಿ ಮಾಲಿಕ ದಿ. ಲಕ್ಷ್ಮಣ ಪುಟ್ಟಪ್ಪ ಕುರುಡೇಕರ್ ಹಾಗೂ ಶ್ರೀಮತಿ ಪಾರ್ವತಮ್ಮ ಲಕ್ಷ್ಮಣ ಕುರುಡೇಕರ್ ಅವರ ಮೊಮ್ಮಗಳ ಮಗ.

ದಿ. ಲಕ್ಷ್ಮಣ ಪುಟ್ಟಪ್ಪ ಕುರುಡೇಕರ್ ಮೊಮ್ಮಗಳಾದ ಅನುರಾಧ ದಿವಾಕರ್ ತನ್ನ ಪತಿಯೊಂದಿಗೆ ಸದ್ಯ ಉಡುಪಿಯಲ್ಲಿ ವಾಸಿಸುತ್ತಿದ್ದಾರೆ. ತನ್ನ ಮಗ ಕರೋಡ್ ಪತಿ ರಿಯಾಲಿಟಿ ಗೇಮ್ ಶೋ ನಲ್ಲಿ ಭಾಗವಹಿಸಿ 50 ಲಕ್ಷ ಗೆದ್ದಿರುವುದು ಖುಷಿ ತಂದಿದೆ ಎನ್ನುತ್ತಾರೆ ತಾಯಿ ಅನುರಾಧ.

ಅಮಿತಾಬ್ ಎದುರು ಹಾಟ್ ಸೀಟ್‌ನಲ್ಲಿ ಕುಳಿತುಕೊಳ್ಳುವುದು ಪ್ರತಿಯೊಬ್ಬರ ಕನಸು. ಅದನ್ನು ನನಸಾಗಿಸಿಕೊಳ್ಳಲು ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ ಸತತ ತಾಲೀಮು ನಡೆಸಿದ್ದಾರೆ ಅನಮಯ.

ನಾನು ಆಯ್ಕೆಯಾಗಿದ್ದು (3ನೇ ಪುಟಕ್ಕೆ)


## ಶ್ರೀ ಹರ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ

ಶಿವಮೊಗ್ಗ ರಸ್ತೆ, ಹರಿಹರ-577 601, ದಾವಣಗೆರೆ ಜಿಲ್ಲೆ
2019-2020ನೇ ಸಾಲಿನ
10ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು

ನಮ್ಮ ಸಂಘದ 10ನೇ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು
ದಿನಾಂಕ : 20.12.2020ನೇ ಭಾನುವಾರ
ಬೆಳಿಗ್ಗೆ 11.00 ಗಂಟೆಗೆ ಸಂಘದ ಕಛೇರಿ ಆವರಣದಲ್ಲಿ
ಸಂಘದ ಅಧ್ಯಕ್ಷರಾದ ಶ್ರೀಮಾನ್ ಡಿ.ಜಿ. ಶಿವಾನಂದಪ್ಪನವರ
ಘನ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ.
ಸಂಘದ ಸರ್ವಸದಸ್ಯರು ಸಕಾಲಕ್ಕೆ ಆಗಮಿಸಿ ಸಭೆಯನ್ನು
ಯಶಸ್ವಿಗೊಳಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಆಡಳಿತ ಮಂಡಳಿಯ ಪರವಾಗಿ
ಸಹಿ/- (ಜಿ.ವಿ. ಲೋಕೇಶ್) ಕಾರ್ಯದರ್ಶಿ



## ಶುಭ ವಿವಾಹ - ಶುಭಾಶಯಗಳು



ನಮ್ಮ ಬಳಗದ ಅಕೌಂಟೆಂಟ್
ಚಿ. ಹ. ಕುಂ. ಸೌ. ಪೂಜಾ ಕೆ.ವಿ.
(ಶ್ರೀಮತಿ ಶೋಭಾ ಮತ್ತು ಶ್ರೀ ವಾಸುದೇವ ಕೊಲ್ಲೂರು, ದಾವಣಗೆರೆ. ಇವರ ಪುತ್ರಿ) ಅವರು
ಚಿ. ರಾ. ಮಂಜುನಾಥ
(ಶ್ರೀಮತಿ ಮಂಜುಳಾ ಮತ್ತು ಶ್ರೀ ಸುರೇಶ್, ಭದ್ರಾವತಿ ಇವರ ಸುಪುತ್ರ)
ಅವರೊಂದಿಗೆ ಗೃಹಸ್ಥಾಶ್ರಮಕ್ಕೆ ಪಾದಾರ್ಪಣೆ ಮಾಡುತ್ತಿರುವ
ಈ ಶುಭ ಸಂದರ್ಭದಲ್ಲಿ ನೂತನ ದಂಪತಿಗೆ ಹಾರ್ದಿಕ ಶುಭಾಶಯಗಳು.

ವಿವಾಹ ದಿನಾಂಕ : 17.12.2020ನೇ ಗುರುವಾರ,
ಸಮಯ : ಬೆಳಿಗ್ಗೆ 8.15 ರಿಂದ 8.45.
ವಿವಾಹ ಸ್ಥಳ : ಮಾಗಾನಹಳ್ಳಿ ಬಸಮ್ಮ ಬಸಪ್ಪ ಕಲ್ಯಾಣ ಮಂಟಪ
ಶ್ರೀ ಬಕ್ಕೇಶ್ವರ ದೇವಸ್ಥಾನದ ಆವರಣ, ಚೌಕಿಪೇಟೆ, ದಾವಣಗೆರೆ.

ಜನತಾವಾಣಿ ಬಳಗ


## ಮಳಲಹಳ್ಳಿ : ನಾಮಪತ್ರ ಸಲ್ಲಿಸದ ಗ್ರಾಮಸ್ಥರು

ಮಲೇಬೆನ್ನೂರು, ಡಿ.16- ಎಳೆಹೊಳೆ ಗ್ರಾ.ಪಂ. ವ್ಯಾಪ್ತಿಯಲ್ಲಿ ಬರುವ ಮಳಲಹಳ್ಳಿ ಗ್ರಾಮಸ್ಥರು ಗ್ರಾ.ಪಂ. ಚುನಾವಣೆಗೆ ನಾಪತ್ರ ಸಲ್ಲಿಸಲು ಕೊನೆಯ ದಿನವಾದ ಬುಧವಾರ ಯಾರೂ ನಾಮಪತ್ರ ಸಲ್ಲಿಸದೇ ಚುನಾವಣೆ ಬಹಿಷ್ಕಾರ ಮಾಡುವ ತಮ್ಮ ನಿರ್ಧಾರವನ್ನು ಗಟ್ಟಿಗೊಳಿಸಿದ್ದಾರೆ.

ಗ್ರಾಮಕ್ಕೆ ಅವಶ್ಯವಿರುವ ಮೂಲಭೂತ ಸೌಲಭ್ಯ ಕಲ್ಪಿಸಿಲ್ಲ ಮತ್ತು ಅಧಿಕಾರಿಗಳು ನಮ್ಮ ಬೇಡಿಕೆಗೆ ಇದುವರೆಗೂ ಸ್ಪಂದಿಸಿಲ್ಲ ಎಂಬ ಆರೋಪ ಮಾಡಿ, ಗ್ರಾಮಸ್ಥರು ಗ್ರಾ.ಪಂ. ಚುನಾವಣೆಯನ್ನು ಬಹಿಷ್ಕಾರ ಮಾಡುವುದಾಗಿ ಮಂಗಳವಾರ ಚುನಾವಣಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು.

ಆ ಪ್ರಕಾರ ಬುಧವಾರ ಯಾರ ಮನವಿಗೂ ಮಣಿಯದೇ ಚುನಾವಣೆಯಿಂದ ದೂರ ಉಳಿದಿದ್ದಾರೆ. ಬುಧವಾರ ಕೂಡ ತಹಶೀಲ್ದಾರ್ ಕೆ.ಬಿ.ರಾಮಚಂದ್ರಪ್ಪ, ಉಪ ತಹಶೀಲ್ದಾರ್ ಆರ್.ರವಿ, ಪಿಎಸ್ಐ ವೀರಬಸಪ್ಪ ಮತ್ತಿತರೆ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ, ಗ್ರಾಮಸ್ಥರು ಮನವೊಲಿಸುವ ಯತ್ನ ವಿಫಲವಾಯಿತು.

## ಹರಿಹರ ಶಿಕ್ಷಕರ ಸಂಘಕ್ಕೆ ಚುನಾವಣೆ ಫಲಿತಾಂಶ ಪ್ರಕಟ

ಹರಿಹರ, ಡಿ.16- ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಹೆಚ್. ಚಂದ್ರಪ್ಪ, ಗದಿಗೆಪ್ಪ ಹಳೇಮನಿ, ಶರಣ್ ಕುಮಾರ್ ಹೆಗಡೆ, ಮಂಜಪ್ಪ ಬಿದರಿ, ಚನ್ನಬಸಪ್ಪ, ಎಂ.ಹೆಚ್. ನಾಗರಾಜ್, ಕರಿಬಸಪ್ಪ ಕುಪ್ಪೇಲೂರು, ಸಿದ್ದಪ್ಪ ಸಂಗಣ್ಣನವರ್, ಮಲ್ಲಿಕಾರ್ಜುನ ಅಂಗಡಿ, ಕೆ.ಎಂ. ರುದ್ರಪ್ಪ ಹಾಗೂ ಮಹಿಳಾ ಮೀಸಲು ಕ್ಷೇತ್ರದಿಂದ ಹೆಚ್. ಜೋತಿ, ಆರ್.ಎಂ ಮಮತಾ, ಬಿ. ಸುಮಂಗಳಾ, ಬಿ.ಇ. ವಿನೋದ ಅವರುಗಳು ಆಯ್ಕೆಯಾಗಿದ್ದಾರೆ.


## ಜನ್ಮದಿನದ ಶುಭಾಶಯಗಳು



ನನ್ನ ರಾಜಕೀಯ ಗುರುಗಳಾದ
ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಪುತ್ರರೂ,
ಮಾಜಿ ಮುಖ್ಯಮಂತ್ರಿಗಳೂ, ನನ್ನ ಆತ್ಮೀಯರೂ ಆದ
ಶ್ರೀ ಹೆಚ್.ಡಿ. ಕುಮಾರಸ್ವಾಮಿ
ಅವರಿಗೆ
ಜನ್ಮದಿನದ
ಹಾರ್ದಿಕ
ಶುಭಾಶಯಗಳು



ಸ್ವತಹ ನಮ್ಮ ಪ್ರಧಾನಿ ನರೇಂದ್ರ ಮೋದಿಯವರೇ
ಕುಮಾರಸ್ವಾಮಿಯವರಿಗೆ ಶುಭ ಹಾರೈಸಿದ್ದು,
ಮೋದಿಯವರ ಪ್ರೀತಿಗೆ ಪಾತ್ರರಾಗಿರುವ
ಹೆಚ್.ಡಿ. ಕುಮಾರಸ್ವಾಮಿಯವರು
ನೂರ್ಕಾಲ ಬಾಳಲಿ ಎಂದು ಹಾರೈಸುತ್ತೇವೆ.

ಎನ್.ಜಿ. ಪುಟ್ಟಸ್ವಾಮಿ
ಬಿ.ಜೆ.ಪಿ ಮುಖಂಡರು, ಮತ್ತು
ಸಹೋದರರು, ಮಕ್ಕಳು, ಸೊಸೆಯಂದಿರು
ಹಾಗು ಮೊಮ್ಮಕ್ಕಳು, ದಾವಣಗೆರೆ.
98440 86632



## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 16.12.2020ರ
ಬುಧವಾರ ನಿಧನರಾದ
ನಿವೃತ್ತ ಅಪರ ಜಿಲ್ಲಾಧಿಕಾರಿ
ಶ್ರೀ ಎಸ್.ಹೆಚ್. ವಿಜಯಕುಮಾರ್
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಕುಟುಂಬ ವರ್ಗಕ್ಕೆ ಅವರ
ಅಗಲಿಕೆಯ ದುಃಖವನ್ನು ಭರಿಸುವ
ಶಕ್ತಿಯನ್ನು ಕರುಣಿಸಲೆಂದು
ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

- ಮಳಲ್ಕೆರೆ ಎಂ.ಎಸ್. ಮಹೇಶ್ವರಯ್ಯ, ವರ್ತಕರು, ದಾವಣಗೆರೆ.
- ಯು.ಎಸ್. ರೇವಣಸಿದ್ದಯ್ಯ, ಮಳಲ್ಕೆರೆ ಆಗ್ರೋ ಏಜೆನ್ಸೀಸ್
- ಬಿ.ಆರ್. ಸಿದ್ದಲಿಂಗಯ್ಯ, ನಿವೃತ್ತ ಪ್ರೊಫೆಸರ್, ದಾವಣಗೆರೆ.
- ಕೆ.ಜಿ.ಕೆ. ರಾಜಣ್ಣ, ವರ್ತಕರು, ದಾವಣಗೆರೆ.
- ಬಾಡ ಬಿ.ಕೆ. ಗುರುಶಾಂತಪ್ಪ, ವರ್ತಕರು, ದಾವಣಗೆರೆ.
- ಶಿವ ವಾಯುವಿಹಾರ ಬಳಗ,
- ಸ್ಟೇಡಿಯಂ ವಾಯುವಿಹಾರ ಬಳಗ, ದಾವಣಗೆರೆ ಮತ್ತು
- ಮಳಲ್ಕೆರೆ ರೈತ ಬಾಂಧವರು.



## ಶ್ರೀ ವಿಶ್ವಬಂಧು ಕ್ರೆಡಿಟ್ ಕೋ-ಆಪ್ ಸೊಸೈಟಿ ನಿಯಮಿತ ಹರಿಹರ-577 601.

### 22ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ನೋಟೀಸ್

ಶ್ರೀ ವಿಶ್ವಬಂಧು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ, ಹರಿಹರ ಇದರ 2019-2020ನೇ ಸಾಲಿನ 22ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ 18.12.2020ನೇ ಶುಕ್ರವಾರ ಮಧ್ಯಾಹ್ನ 12.00 ಘಂಟೆಗೆ ಶಿವಮೊಗ್ಗ ರಸ್ತೆಯಲ್ಲಿರುವ ಶ್ರೀ ಜಗದ್ಗುರು ತರಳಬಾಳು ಶಾಲಾ ಆವರಣದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಬಿ. ರಾಮಚಂದ್ರಪ್ಪ ಇವರ ಘನ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಆಡಳಿತ ಮಂಡಳಿಯ ಸದಸ್ಯರು



ಬಿ. ರಾಮಚಂದ್ರಪ್ಪ ಬೆಳ್ಳೂಡಿ, ಅಧ್ಯಕ್ಷರು | ಶ್ರೀಮತಿ ಡಿ. ವನಜಾಕ್ಷಮ್ಮ ಕುಂಬಳೂರು, ಉಪಾಧ್ಯಕ್ಷರು | ಕೆ. ಕುಮಾರ್, ಹೊಳೆಸಿರಿಗೆರೆ, ನಿರ್ದೇಶಕರು | ಹೆಚ್. ನಾಗರಾಜ್, ಅಮರಾವತಿ ನಿರ್ದೇಶಕರು | ಹೆಚ್. ಶಾಂತವೀರಪ್ಪ ಯಲವಟ್ಟಿ, ನಿರ್ದೇಶಕರು | ಕೆ. ದೇವೇಂದ್ರಪ್ಪ, ಹೊಳೆಸಿರಿಗೆರೆ, ನಿರ್ದೇಶಕರು | ಕೆ.ಜಿ. ಮೂರ್ತಿ, ಕುಂಬಳೂರು ನಿರ್ದೇಶಕರು



ಕೆ.ಎಸ್. ದೇವರಾಜ್ ಕುಂಬಳೂರು, ನಿರ್ದೇಶಕರು | ಪಾರ್ವತಮ್ಮ ಶೇಖರಪ್ಪ ಹರಿಹರ, ನಿರ್ದೇಶಕರ | ಜಿ. ಮಲ್ಲಪ್ಪ, ಬೆಳ್ಳೂಡಿ ನಿರ್ದೇಶಕರು | ಕಡೆಮನೆ ಪುಟ್ಟಪ್ಪ, ಕುಂಬಳೂರು ನಿರ್ದೇಶಕರು | ಎನ್. ನಾಗರಾಜ್ ಹೊಳೆಸಿರಿಗೆರೆ. ನಿರ್ದೇಶಕರು | ಎನ್.ಕೆ. ಪ್ರಕಾಶ್, ಬೆಳ್ಳೂಡಿ ನಿರ್ದೇಶಕರು | ಕೆ.ಟಿ. ಶಂಭುಲಿಂಗಪ್ಪ ವ್ಯವಸ್ಥಾಪಕರು

ಸಿಬ್ಬಂದಿ ವರ್ಗ ಮತ್ತು ಪಿಗ್ಮಿ ಸಂಗ್ರಾಹಕರು



ಬಿ. ಗಣೇಶ್ ಲೆಕ್ಕಿಗರು | ಕೆ.ಹೆಚ್. ಉಮೇಶ್ ನಗದು ಗುಮಾಸ್ತರು | ಬಿ.ಎಸ್. ರಾಘವೇಂದ್ರ ಕುಮಾರ್ ದ್ವಿ. ದರ್ಜೆ ಗುಮಾಸ್ತರು | ಜಿ. ಎಂ. ರವಿಕುಮಾರ್ ಅಟೆಂಡರ್ | ಶ್ರೀಮತಿ ನಿರ್ಮಲಾ ಜಿ.ಎನ್. ದಿನಗೂಲಿ ನೌಕರರು | ಹನುಮಂತಪ್ಪ ಬೇಡರ್ ಪಿಗ್ಮಿ ಸಂಗ್ರಾಹಕರು | ಆರ್.ಬಿ. ಸುರೇಶ್ ಪಿಗ್ಮಿ ಸಂಗ್ರಾಹಕರು



ಎ.ಬಿ. ಮಂಜುನಾಥ್ ಪಿಗ್ಮಿ ಸಂಗ್ರಾಹಕರು | ಎಸ್.ಬಿ. ವಿಜಯ್‌ಕುಮಾರ್ ಪಿಗ್ಮಿ ಸಂಗ್ರಾಹಕರು | ಹೆಚ್. ಶಿವಮೂರ್ತಿ ಪಿಗ್ಮಿ ಸಂಗ್ರಾಹಕರು | ಎಸ್. ಫಣಿರಾಜ್ ಪಿಗ್ಮಿ ಸಂಗ್ರಾಹಕರು | ಜಿ.ಆರ್. ಭೀಮಪ್ಪ ಪಿಗ್ಮಿ ಸಂಗ್ರಾಹಕರು | ಜಿ.ಎಂ. ವಸಂತ್ ಕುಮಾರ್ ಪಿಗ್ಮಿ ಸಂಗ್ರಾಹಕರು | ಜಿ.ಆರ್. ನಾಗರಾಜ್ ಪಿಗ್ಮಿ ಸಂಗ್ರಾಹಕರು | ಎ.ಎಸ್. ಟಾಟಾದೇವ್ ಪಿಗ್ಮಿ ಸಂಗ್ರಾಹಕರು

ಸಂಘವು ದಿ. : 31.03.2020ಕ್ಕೆ ರೂ. 38,88,373-10ಗಳ ಲಾಭ ಗಳಿಸಿರುತ್ತವೆ. ಸದಸ್ಯರುಗಳಿಗೆ ಈ ವರ್ಷ ಶೇ. 15% ರಂತೆ ಡಿವಿಡೆಂಡ್ ನೀಡಲು ಆಡಳಿತ ಮಂಡಳಿಯು ತೀರ್ಮಾನಿಸಿದ್ದು, ಮಹಾಸಭೆಯಲ್ಲಿ ಸದಸ್ಯರ ಒಪ್ಪಿಗೆಗಾಗಿ ಮಂಡಿಸಲಾಗಿದೆ.

ಸಂಘದ ಕಳೆದ ಐದು ವರ್ಷಗಳ ಪ್ರಗತಿಯ ಪಕ್ಷಿನೋಟ

| ಕ್ರ.ಸಂ. ವಿವರಗಳು | 2015-2016 | 2016-2017 | 2017-2018 | 2018-2019 | 2019-2020 |
|---|---|---|---|---|---|
| 1) ಸದಸ್ಯರು | 1167 | 1176 | 1199 | 1219 | 1240 |
| 2) ಷೇರು ಬಂಡವಾಳ | 41,16,641-00 | 45,55,919-00 | 54,04,139-00 | 67,24,074-00 | 80,38,903-00 |
| 3) ಠೇವಣಿಗಳು | 3,97,39,262-21 | 4,31,77,087-21 | 5,02,78,578-67 | 8,24,72,858-67 | 11,16,21,850-95 |
| 4) ಸಾಲಗಳು | 4,18,70,348-00 | 4,01,25,070-00 | 4,59,97,852-00 | 7,99,50,679-00 | 10,86,33,548-00 |
| 5) ಲಾಭ | 15,16,674-11 | 10,01,363-25 | 16,07,083-89 | 25,04,735-51 | 38,88,373-10 |
| 6) ಡಿವಿಡೆಂಡ್ | 13% | 12% | 14% | 14% | 15% ಪ್ರಸ್ತಾಪಿತ |
| 7) ಲೆಕ್ಕ ಪರಿಶೋಧಕ ವರ್ಗ | 'ಬಿ' | 'ಬಿ' | 'ಬಿ' | 'ಬಿ' | 'ಬಿ' |

### ಠೇವಣಿಗಳ ಮೇಲಿನ ಬಡ್ಡಿ ದರ

| | |
|---|---|
| 1) 45 ದಿನಗಳಿಂದ 90 ದಿನಗಳವರೆಗೆ | 6.0% |
| 2) 91 ದಿನಗಳಿಂದ 180 ದಿನಗಳವರೆಗೆ | 7.0% |
| 3) 181 ದಿನಗಳಿಂದ 12 ತಿಂಗಳವರೆಗೆ | 8.0% |
| 4) 13 ತಿಂಗಳಿಂದ 24 ತಿಂಗಳವರೆಗೆ | 9.0% |
| 5) 25 ತಿಂಗಳಿಂದ 36 ತಿಂಗಳವರೆಗೆ | 9.5% |
| 6) 37 ತಿಂಗಳಿಂದ ಮೇಲ್ಪಟ್ಟು | 10% |

(85 ತಿಂಗಳಲ್ಲಿ ಠೇವಣಿ ಮೊತ್ತ ದ್ವಿಗುಣಗೊಳ್ಳುವುದು)

### ಸಾಲಗಳ ಮೇಲಿನ ಬಡ್ಡಿ ದರಗಳು

| | |
|---|---|
| 1) ಜಾಮೀನು ಸಾಲ | 17% |
| 2) ವಾಹನ ಆಧಾರಿತ ಸಾಲ | 14% |
| 3) ಅಡವು ಸಾಲ | 14% |
| 4) ಠೇವಣಿಗಳ ಮೇಲಿನ ಸಾಲ | 12% |
| 5) ಚಿನ್ನಾಭರಣ ಸಾಲ | 12% |
| 6) ಓ.ಡಿ. ಸಾಲ (ಸಾಲಧಾರಿತ) | |

ದಿನಾಂಕ : 17.12.2020, ಸ್ಥಳ : ಹರಿಹರ.
ಸಭೆಗೆ ಆಗಮಿಸುವವರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು ಮತ್ತು ಅಂತರವನ್ನು ಕಾಪಾಡಬೇಕು.

ಕಾರ್ಯಕಾರಿ ಮಂಡಳಿಯ ಆದೇಶದ ಮೇರೆಗೆ
ಸಹಿ/- ಕೆ.ಟಿ. ಶಂಭುಲಿಂಗಪ್ಪ, ವ್ಯವಸ್ಥಾಪಕರು

ವಿ.ಸೂ. : ಈಗಾಗಲೇ ಸದಸ್ಯರಿಗೆ ಆಹ್ವಾನಗಳನ್ನು ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಸಭೆಗೆ ಹಾಜರಾಗಬೇಕಾಗಿ ವಿನಂತಿ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte